ಯಶಸ್ವೀ ಕೇರಳ ಬಂದ್: ಕೇಂದ್ರ ಸರಕಾರದ ಪಾತಕೀ ನೀತಿಗೆ ಜನತೆಯ ಧಿಕ್ಕಾರ!

ಅರುಣ

ಪ್ರಗತಿಶೀಲ ಕನ್ನಡ ವಾರಪತ್ರಿಕೆ ಮಂಗಳೂರು-1.

[ಬೆಲೆ: 12 ಪೈಸೆ]

ಸಂಪುಟ 21 17–9–1967ನೇ ಆದಿತ್ಯವಾರ ಸಂಚಿಕೆ 38

ಕೇಂದ್ರ ಸರಕಾರ ಕೇವಲ ರಾಜಕೀಯ ಕುರುಡು ದ್ವೇಷದಿಂದ ಕೇರಳದ ಕಡೆಗೆ ತೋರುವ ಪಾತಕೀ ಪಕ್ಷಪಾತವನ್ನು ಕಳೆದ ತಾ. 11ರಂದು ಕೇರಳದ ಜನತೆ ಒಂದಾಗಿ ಐಕ್ಯತೆಯಿಂದ ಪ್ರತಿಭಟಿಸಿತು. ತಾ. 11ರಂದು ಇಡಿಯ ಕೇರಳ ಬಂದಾಗಿತ್ತು. ರೈಲ್ವೇ ಸಂಚಾರವಾಗಲೀ, ವಿಮಾನಯಾನವಾಗಲಿ, ಬಸ್‌ಗಳ ಓಡಾಟವಾಗಲಿ ಎಲ್ಲವೂ ಸ್ತಬ್ಧವಾಗಿದ್ದುವು. ಕಾರ್ಖಾನೆಗಳೆಲ್ಲವೂ ಸಂಪೂರ್ಣ ಮುಚ್ಚಲ್ಪಟ್ಟಿದ್ದುವು. ಅಂಗಡಿ, ಭಂಡಸಾಲೆಗಳು, ಶಾಲಾ ಕಾಲೇಜುಗಳು, ಸರಕಾರೀ ಕಚೇರಿಗಳು, ಹೆಚ್ಚೇಕೆ ಆಕಾಶವಾಣಿ ನಿಲಯ ಕೂಡಾ ಅಂದು ತೆರೆದಿರಲಿಲ್ಲ. ತಮ್ಮ ರಾಷ್ಟ್ರೀಯ ಹಬ್ಬ ಓಣಂನಂದು ತಮ್ಮನ್ನು ಉಪವಾಸ ಹಾಕಿ ಕೆಡಹುವ ಕೇಂದ್ರದ ಕಾಂಗ್ರೆಸ್ ಸರಕಾರದ ನೀತಿಗೆ ಅಂದು ಇಡಿಯ ಕೇರಳದ ಜನತೆ ತಮ್ಮ ಧಿಕ್ಕಾರವನ್ನು ಸೂಚಿಸಿದರು.

ಅತುಲ್ಯ ಘೋಷ್ ಬಂದದ್ದೇಕೆ?

ಈ ಕೇರಳ ಬಂದ್ ಅನ್ನು ವಿಫಲಗೊಳಿಸಬೇಕು, ಅದು ಸಾಧ್ಯವಾಗದೆ ಹೋದರೆ ಗಲಭೆ ಗೊಂದಲ ಪುಂಡಾಟಿಕೆಗಳನ್ನಾದರೂ ಉಂಟುಮಾಡಿ ಕೇರಳದಲ್ಲಿ 'ಅರಕ್ಷಿತಾವಸ್ಥೆ' ಎಂಬ ಕೃತಕ ಗುಲ್ಲನ್ನೆಬ್ಬಿಸಬೇಕು ಎಂಬುದಾಗಿ ಕೇರಳದಲ್ಲಿ ಕಸದ ಬುಟ್ಟಿಗೆ ತಳ್ಳಲ್ಪಟ್ಟಿದ್ದ ಕಾಂಗ್ರೆಸೂ, ಈ ಹೆಸರಿನಲ್ಲಾದರೂ ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿ ಜಾತೀಯ ಕಲಹವನ್ನು ಹಬ್ಬಿಸಬೇಕೆಂದು ಜಾತೀಯವಾದೀ ಆರ್ಯಸ್ಯಸ್ ಜನಸಂಘಗಳೂ ಯತ್ನಿಸಿದುವು. ಬಂದ್‌ನ ವಿರುದ್ಧ ಗಲಭೆ ದೊಂಬಿ ಎಬ್ಬಿಸಲು ಎ.ಐ.ಸಿ.ಸಿ.ಯ ಕೋಶಾಧಿಕಾರಿ ಶ್ರೀ ಅತುಲ್ಯ ಘೋಷ್ ಇವರೇ ಖುದ್ದಾಗಿ ಬಂದಿದ್ದರು. ಆದರೆ ಈ ಬಂದ್‌ಗೆ ಕೇರಳದ ಜನಕೋಟಿಯಿಂದ ದೊರೆತ ಬೆಂಬಲ, ಕಾಂಗ್ರೆಸ್, ಆರ್ಯಸ್ಯಸ್‌ಗಳ ದುಷ್ಟ ಆಟಗಳನ್ನು ನಡೆಯಗೊಡಲಿಲ್ಲ. ಬಂದ್ ಜಯಪ್ರದವಾಯಿತು.

ಕಾಸರಗೋಡಿನಲ್ಲಿ

ಕಾಸರಗೋಡಿನಲ್ಲಿ ಕಾಂಗ್ರೆಸಿಗರೂ, ಜನಸಂಘೀಯರೂ ಈ ಜನತಾ ಚಳವಳದಲ್ಲಿ ಜಾತೀಯ ಬೆಂಕಿ ಎಬ್ಬಿಸಲು ನೋಡಿದರು. ಆದರೆ ವಿಫಲರಾದರು. ಆದರೆ ಈ ಘಟನೆ ಘಟನಾ ನಂತರದ ಕೆಲವೊಂದು ಹೇಳಿಕೆಗಳನ್ನು ನೋಡುವಾಗ ಈ ಪ್ರದೇಶದ ಜನಪ್ರತಿನಿಧಿಗಳೆಂದು ಹೇಳಿಕೊಳ್ಳುವವರು ಈ ಪ್ರತಿಗಾಮಿ ಶಕ್ತಿಗಳ ಕೈವಾರಿಗಳಾಗಿದ್ದಾರೆಯೋ ಎಂಬ ಸಂದೇಹ ಉಂಟಾವಾಗುತ್ತದೆ. ಏಕೆಂದರೆ ಇಂತಹ ಘಟನೆಗಳಿಗೆ ಪ್ರಚೋದನೆಯಿತ್ತ ದುಷ್ಟ ಶಕ್ತಿಗಳನ್ನು ಖಂಡಿಸುವ ಗೋಜಿಗೇ ಹೋಗದೆ, ವಿವಿಧ ವಿಭಾಗದ ಜನರನ್ನು ಕೆರಳಿಸುವಂತಹ ಹೇಳಿಕೆಗಳನ್ನು ಇವರು ಕೊಡುತಿದ್ದಾರಲ್ಲದೆ-ಕಾಸರಗೋಡಿನ ಜನರಿಗೆ ಕೇಂದ್ರ ಸರಕಾರ ರಕ್ಷಣೆ ನೀಡಬೇಕು ಎಂದು ಹೇಳುವ ಮೂಲಕ ಕೇರಳದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತೆ ಜ್ಯಾರಿಯಾಗಬೇಕೆಂದು ಸೂಚ್ಯವಾಗಿತಿಳಿಸಿದ್ದಾರೆ.

ಕಾಸರಗೋಡಿನ ಘಟನೆಗಳಿಗಾಗಿ ನಾವು ವಿಷಾಧಿಸುತ್ತೇವೆ. ಜನಪ್ರಿಯ ಸಂಯುಕ್ತರಂಗ ಸರಕಾರದಡಿಯಲ್ಲಿ ಗೋಳಿಬಾರುಗಳಂತಹ ಘಟನೆಯು ನಡೆಯ ಕೂಡದಿತ್ತು. ಇಬ್ಬರು ವಿದ್ಯಾರ್ಥಿಗಳ ಅಮೂಲ್ಯ ಪ್ರಾಣ ನಷ್ಟವಾಗಬಾರದಿತ್ತು. ಗೋಳಿಬಾರು ಅನಿವಾರ್ಯವಾಗಿತ್ತೆ? ಪೋಲಿಸರ ಕ್ರಮ ಸರಿಯಾಗಿತ್ತೆ ? ಎಂಬುದನ್ನು ವಿಚಾರಣೆ ನಡೆಸಲು ಸರಕಾರ ವಿಚಾರಣಾ ಸಮಿತಿಯನ್ನು ನೇಮಿಸಿದ್ದರಿಂದ ಈ ವಿಷಯದಲ್ಲಿ ಸದ್ಯಕ್ಕೆ ನಾವು ಏನನ್ನೂ ಬರೆಯಲು ಹೋಗುವುದಿಲ್ಲ.

— — — —

ಕಾಸರಗೋಡಿನಲ್ಲಿ ಜಾತೀಯ ದಂಗೆ ಎಬ್ಬಿಸಲು ಕಾಂಗ್ರೆಸ್ ಆರ್ಯಸ್ಯಸ್ ಯತ್ನ! ಜಾತ್ಯಾತೀತ ಶಕ್ತಿಗಳಿಗೊಂದು ಎಚ್ಚರಿಕೆ!

ಕೇರಳ ಬಂಗಾಲ ಮತ್ತಿತರ ಕಾಂಗ್ರೆಸ್ಸೇತರ ಸರಕಾರಗಳನ್ನು ಮತ್ತು ಅಲ್ಲಿಯ ಜನತೆಯನ್ನು ವಂಚಿಸಲು ಗುತ್ತಿಗೆ ಭಂಡವಾಳದ ಹಿಡಿತಕ್ಕೆ ಸಿಲುಕಿರುವ ಕೇಂದ್ರ ಸರಕಾರ ಹಾಗೂ ಕಾಂಗ್ರೆಸ್ ಸಂಘಟನೆ ಸರ್ವವಿಧದ ಪ್ರಯತ್ನಗಳನ್ನು ನಡೆಸುತ್ತಿದೆ. ರಾಜಕೀಯ ಸಾಂಪತ್ತಿಕ ಒತ್ತಡಗಳನ್ನು ಹೇರಿ ಈ ಸರಕಾರಗಳನ್ನು ಉರುಳಿಸುವ ಪ್ರಯತ್ನಗಳು ನಡೆಯುತ್ತಿವೆ. ಆದರೆ ಜನತೆ ಈ ಎಲ್ಲಾ ಹಂಚಿಕೆಗಳನ್ನು ಮುರಿಯಲು ಒಗ್ಗಟ್ಟಾಗಿ ತಮ್ಮ ಸಂಘ ಶಕ್ತಿಯನ್ನು ಬೆಳೆಸಿಕೊಂಡು ರಾಜ್ಯ ಸರಕಾರಗಳ ರಕ್ಷಣೆಗಾಗಿ ಸಮರ ಮಾರ್ಗದಲ್ಲಿ ಮುನ್ನಡೆಯುತ್ತಿದೆ.

ಕಳೆದ ಮಹಾ ಚುನಾವಣೆಗೆ ಮುಂಚಿತವಾಗಿಯೇ ಕಾಂಗ್ರೆಸ್ಸು ಕೇರಳದಲ್ಲಿ ತನ್ನ ಕುತಂತ್ರವನ್ನು ಪ್ರಯತ್ನಿಸಿತ್ತು. ಚುನಾವಣೆಗೆ ಕೆಲವು ವಾರಗಳ ಮೊದಲೇ ರೇಶನ್ ಪಡಿತರದಲ್ಲಿ ಕಡಿತವನ್ನುಂಟುಮಾಡಿ ಜನರನ್ನು ಭಯಕ್ಕೀಡುಮಾಡಲು ಪ್ರಯತ್ನಿಸಿತು. ಕಾಂಗ್ರೆಸ್ಸನ್ನು ಅಧಿಕಾರದಿಂದ ಉರುಳಿಸಿದರೆ ಕೇಂದ್ರ ಸರಕಾರದಿಂದ ಆಹಾರ ದೊರಕಲಾರದು ಎಂಬುದೇ ಈ ಮುನ್ಸೂಚನೆಯ ಅರ್ಥ. ಆದರೆ ಕೇರಳದ ಜನರು ಈ ಬೆದರಿಕೆಯನ್ನು ಅಲಕ್ಷಿಸಿ ಕಾಂಗ್ರೆಸ್ಸನ್ನು ಚುನಾವಣೆಯಲ್ಲಿ ಸೋಲಿಸಿ ಸಂಯುಕ್ತರಂಗದ ಸರಕಾರವನ್ನು ಅಧಿಕಾರಕ್ಕೆ ಏರಿಸಿದರು. ಅಂದಿನಿಂದ ಕೇಂದ್ರ ಸರಕಾರದಿಂದ ದೊರಕುತ್ತಿದ್ದ ಆಹಾರ ಧಾನ್ಯಗಳು ಇನ್ನೂ ಕಡಿಮೆಯಾದುವು. ತಿಂಗಳಿಗೆ 75000 ಟನ್ ಅಕ್ಕಿ ಕೊಡಲು ಒಪ್ಪಿದ ಕೇಂದ್ರ ಸರಕಾರ ತಿಂಗಳಿಗೆ 40,000 ಟನ್ ಅಕ್ಕಿಯನ್ನೂ ಒದಗಿಸಲಿಲ್ಲ. ಕೇರಳ ಸರಕಾರದ ಎಲ್ಲಾ ವಿನಂತಿಗಳು ಕಡೆಗಣಿಸಲ್ಪಟ್ಟ ನಂತರ ಸಪ್ಟೆಂಬರ್ 11ಕ್ಕೆ 'ಕೇರಳ ಬಂದ್' ಆಚರಿಸಲು ಸಂಯುಕ್ತರಂಗ ಜನತೆಗೆ ಆಹ್ವಾನವಿತ್ತಿತ್ತು.

ಶ್ರೀ ಯು. ಯಲ್. ಭಟ್

ಕಾರ್ಯದರ್ಶಿ: ಭಾರತ ಕಮ್ಯುನಿಸ್ಟ್ ಪಾರ್ಟಿಯ ಕಾಸರಗೋಡು ತಾಲೂಕು ಸಮಿತಿ

ಕೇಂದ್ರ ಸರಕಾರದ ಮಂತ್ರಿಗಳೂ, ಕೇರಳದ ಕಾಂಗ್ರಸ್ಸು ಮುಖಂಡರೂ ಜನಸಂಘ, ಆರ್. ಯಸ್. ಯಸ್. ಸಂಘಟನೆಗಳೂ, ಕರ್ನಾಟಕ ಸಮಿತಿಯ ಕೆಲವು ಮುಖಂಡರೂ 'ಕೇರಳ ಬಂದ್'ನ್ನು ಮುರಿಯಲು ಪ್ರಯತ್ನಿಸಿದರು. ಕೆಚ್ಚಿನ ಪತ್ರಿಕೆಗಳು 'ಬಂದ್'ಗೆ ಇದಿರಾದ ಪ್ರಚಾರ ಕಾರ್ಯ ಪ್ರಾರಂಭಿಸಿದವು.

ಕಾಸರಗೋಡು ತಾಲೂಕಿನಲ್ಲಿ 'ಬಂದ್' ನಡೆಯದಂತೆ ಮಾಡಲು ಮುಖ್ಯವಾಗಿ ಜನಸಂಘ, ಆರ್. ಯಸ್. ಯಸ್.ನ ಕಾರ್ಯಕರ್ತರು ಬಹಳವಾಗಿ ಶ್ರಮಿಸಿದರು. ಆರ್. ಯಸ್. ಯಸ್.ನ ಮುಖಂಡತ್ವದಲ್ಲಿದ್ದ ವರ್ತಕ ಸಂಘ, 'ಬಂದ್'ಗೆ ಅನುಕೂಲಗಳಿರುವಲ್ಲಿ ಭೀತಿಯನ್ನುಂಟುಮಾಡಲು ಸಿದ್ಧತೆಗಳನ್ನು ನಡೆಸಿದರು. ಕೇರಳ ಬಂದನ್ನು ವಿಫಲಗೊಳಿಸಲು ಜನಸಂಘ, ಆರ್. ಯಸ್. ಯಸ್. ನೇತೃತ್ವಕ್ಕೆ ಎರಡು ಮುಖ್ಯ ಉದ್ದೇಶಗಳಿದ್ದವು i) ರಾಜಕೀಯ ದೃಷ್ಟಿಯಿಂದ ಕೇರಳ ಸರಕಾರಕ್ಕೆ ಕಾಸರಗೋಡಿನಲ್ಲಿ ಬೆಂಬಲ ಇಲ್ಲವೆಂದು ಚಿತ್ರೀಕರಿಸಬೇಕು ii) ಆ ದಿನ ಹಿಂದು ಮುಸ್ಲಿಂ ಗಲಭೆಯನ್ನುಂಟುಮಾಡಿ ತಮ್ಮ ಸ್ವಾರ್ಥ ಸಾಧನೆಯನ್ನು ಮಾಡಬೇಕು. ಈ ಎರಡು ಉದ್ದೇಶಗಳನ್ನು ಸಾಧಿಸುವುದರಲ್ಲಿಯೂ ಇವರು ಸೋತಿದ್ದಾರೆ.

ಸಪ್ಟೆಂಬರ್ 11ರನ್ನ ಸಂಯುಕ್ತರಂಗದ ಸ್ವಯಂಸೇವಕರು ಕಾಸರಗೋಡು, ಕುಂಬಳೆ, ಮಂಜೇಶ್ವರ ಮತ್ತಿತ್ತರ ಕಡೆಗಳಲ್ಲಿ ಸಂಚರಿಸಿ ಎಲ್ಲಾ ವಿಭಾಗದ ಜನರು ಬಂದ್‌ನಲ್ಲಿ ಭಾಗವಹಿಸಲು ವಿನಂತಿಸಿಕೊಂಡರು. ಇದು ಅತ್ಯಂತ ಶಾಂತರೀತಿಯಿಂದಲೂ, ಶಿಸ್ತಿನಿಂದಲೂ ನಡೆದು ಶಾಂತ ವಾತಾವರಣವನ್ನೂ ನಿರ್ಮಿಸಲು ಸಹಾಯವಾಯಿತು. ಇದರ ಫಲವಾಗಿ ಮಂಜೇಶ್ವರದಲ್ಲಿ "ಬಂದ್" ಸಂಪೂರ್ಣವಾಗಿ ವಿಜಯಗೊಂಡಿತು. ಕಾಸರಗೋಡು, ಕುಂಬ್ಳೆ, ಮತ್ತಿತರ ಕಡೆಗಳಲ್ಲಿ 100ಕ್ಕೆ 90ಕ್ಕೂ ವಿಜಯ ಹೊಂದಿತು. ಶೇಕಡಾ 90ಕ್ಕೂ ಮಿಕ್ಕಿ ಅಂಗಡಿಗಳು ಮುಚ್ಚಿದ್ದವು. ಕೇರಳ ಸರಕಾರದ ಎಲ್ಲಾ ಆಫೀಸುಗಳೂ, ಕೇಂದ್ರ ಸರಕಾರದ ಎಲ್ಲಾ ಆಫೀಸುಗಳೂ, ಕಾರ್ಖಾನೆಗಳೂ, ಸಿನೆಮಾ ಥಿಯೇಟರುಗಳು ಮುಚ್ಚಿದ್ದವು. ಸಾರಿಗೆ ಸಂಪರ್ಕ ಸಂಪೂರ್ಣ ಸ್ಥಗಿತ ಗೊಂಡಿತ್ತು.

[8ನೇ ಪುಟ ನೋಡಿರಿ]

ಮೊರಾರ್ಜಿ ಅಪಪ್ರಲಾಪ

ಮೊರಾರ್ಜಿ ದೇಸಾಯಿ ಡಾಲರ್ ಭೂಮಿಗೆ ಹೋಗಿ ಜಾನ್ಸನ್ನರಿಗೆ ನಾಲ್ಕು ಡಾಲರುಗಳಿಗಾಗಿ ದೇಶದ ಸ್ವಾಭಿಮಾನವನ್ನೂ, ಮೂಲ ನೀತಿಗಳನ್ನೂ ಅಡವಿಡಲು ಯತ್ನಿಸುತಿದ್ದಾರೆ. ಸಾಮ್ರಾಜ್ಯವಾದಿಗಳ "ನೆರವಿ"ಗಾಗಿ ಭಾರತದ ಮೂಲ ನೀತಿಗಳನ್ನೇ ಎರವಿಡಲು, ದೇಶದ ಈ ನೀತಿಗಳು ಪ್ರತಿಗಾಮಿತ್ವದತ್ತ ಬದಲಿಸಲು ಸನ್ನಾಹ ಮಾಡುತಿದ್ದಾರೆ. ಆವರು ವಾಶಿಂಗ್ಟನ್‌ನಲ್ಲಿ ಕೊಟ್ಟ ಹೇಳಿಕೆಯೊಂದು ಭಾರತ ಸರಕಾರ ತನ್ನ ಮೂಲ ನೀತಿಗಳನ್ನೇ ಪರಿವರ್ತಿಸಲು ಯತ್ನಿಸುತ್ತಿದೆಯೊ ಎಂಬಂತೆ ಕಾಣುತ್ತದೆ.

ಮೊರಾರ್ಜಿ ದೇಸಾಯಿ 2 ಚೀನಾಗಳ ನೀತಿಯನ್ನು ಪ್ರತಿಪಾದಿಸಿದರು. ಫಾರ್ಮೊಸವೊಂದು ಸ್ವತಂತ್ರ ರಾಷ್ಟ್ರವೆಂದು ಹೇಳಿ–ಆದುದರಿಂದ ಆ ಸ್ವತಂತ್ರ ದೇಶಕ್ಕೆ ಮನ್ನಣೆಕೊಟ್ಟರೆ ತಪ್ಪಿಲ್ಲ ಎಂಬ ಅಭಿಪ್ರಾಯವನ್ನು ಸೂಚ್ಯವಾಗಿ ತಿಳಿಸಿದರು.

ಚೀನಾದ ಆಳುವ ವರ್ಗದವರಂತೆಯೇ ಭಾರತದ ಆಳುವ ವರ್ಗದ ಪ್ರತಿಗಾಮಿಗಳೂ ಯತ್ನಿಸುತ್ತಾರೆಂದರೆ ತಪ್ಪಾಗದು. ಭಾರತದ ಅವಿಭಾಜ್ಯ ಅಂಗವಾದ ಕಾಶ್ಮೀರವನ್ನು ಸ್ವತಂತ್ರ 'ರಾಷ್ಟ್ರ'ವಾಗಿ ಮಾಡಲು ಕೆಲವರುಷಗಳ ಹಿಂದೆ ಚೌಎನ್‌ಲಾಯಿಯವರು ಶೇಖ್‌ಅಬ್ದುಲ್ಲರೊಡನೆ ಮಾತುಕತೆ ನಡೆಸಿದ್ದನ್ನು ನಾವು ಮರೆಯಲಾರೆವು. ಅದೇ ರೀತಿ ಚೀನಾದ ಅವಿಭಾಜ್ಯ ಅಂಗವಾದ ಫಾರ್ಮೊಸವನ್ನು 'ಸ್ವತಂತ್ರ' ರಾಷ್ಟ್ರವೆಂದು ಮೊರಾರ್ಜಿ ಕರೆದಿದ್ದಾರೆ.

ಮೊರಾರ್ಜಿಯವರ ಈ ಹೇಳಿಕೆಯನ್ನು ಸ್ವಾಗತಿಸಿದವರೆಂದರೆ ಸಾಮ್ರಾಜ್ಯವಾದಿಗಳ ಏಜಂಟನಾಗಿತುವ ಜನಸಂಘದ ಮಧೋಕ್. ತಮ್ಮ ಪಕ್ಷ ಹತ್ತು ವರುಷಗಳ ಹಿಂದೆ ಹೇಳಿರುವುದನ್ನು ಮೊರಾರ್ಜಿ ದೇಸಾಯಿ

[3ನೇ ಪುಟ ನೋಡಿರಿ]

ಗುಲ್ಬರ್ಗದಲ್ಲಿ ನಿಜಲಿಂಗಪ್ಪನವರಿಗೆ ಕರಿಬಾವುಟ ಸ್ವಾಗತ

ಕಳೆದ ತಾ. 14ರಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಗುಲ್ಬರ್ಗಕ್ಕೆ ಆಗಮಿಸಿದಾಗ ಅಲ್ಲಿನ ಜನತೆಯಿಂದ ಅವರು ಕರಿಬಾವುಟ ಪ್ರದರ್ಶನದ "ಭಾರೀ" ಸ್ವಾಗತವನ್ನು ಸ್ವೀಕರಿಸಬೇಕಾಗಿ ಬಂತು.

ಕಳೆದ ಚುನಾವಣೆಗೆ ಹಿಂದೆ ಇದೇ ಶ್ರೀ ನಿಜಲಿಂಗಪ್ಪನವರು ಗುಲ್ಬರ್ಗಕ್ಕೆ ಬಂದಿದ್ದಾಗ ಇಲ್ಲಿ ಸರಕಾರೀ ಒಡೆತನದಲ್ಲಿರುವ ಯಂ. ಯಸ್. ಕೆ. ಮಿಲ್ಲನ್ನು ಮುಚ್ಚುವುದಿಲ್ಲವೆಂದು ಭರವಸೆಕೊಟ್ಟಿದ್ದರು. ಆದರೆ ಈಗ ಆ ಮಿಲ್ಲನ್ನು ಮುಚ್ಚಲಾಗಿದೆ.

ಇದರ ವಿರುದ್ಧ ಗುಲ್ಬರ್ಗದ ಎಲ್ಲ ಪ್ರತಿಪಕ್ಷಗಳೂ, ಸ್ಥಳೀಯ ನಾಗರಿಕ ಸಮಿತಿಯೂ ಈ ಬಾರಿ ಶ್ರೀ ನಿಜಲಿಂಗಪ್ಪನವರಿಗೆ "ಅಭೂತಪೂರ್ವ" ಕರಿ ಬಾವುಟ ಸ್ವಾಗತವನ್ನು ನೀಡಲು ನಿರ್ಧರಿಸಿತ್ತು.

ಅದರಂತೆ ಕಳೆದ ತಾ. 12ರಂದು ಮುಖ್ಯ ಮಂತ್ರಿಯವರು ಅಲ್ಲಿ ಬಂದಾಗ ಸಹಸ್ರಾರು ಜನರು ಕಮ್ಯುನಿಸ್ಟ್ ನಾಯಕ ಶ್ರೀ ಶ್ರೀನಿವಾಸ ಗುಡಿ, ಅಡೆವೆಪ್ಪ, ಎಡಕಮ್ಯುನಿಸ್ಟ್ ಪಾರ್ಟಿಯ ಶ್ರೀ ಗಂಗಾಧರ ನಮೋಶಿ, ಪಿ. ಯಸ್. ಪಿ.ಯ ಶ್ರೀ ಕುಸುಮಾಕರ್ ದೇಸಾಯಿ, ಕಾರ್ಮಿಕರ ಪ್ರತಿನಿಧಿ ಶ್ರೀ ಬಾಬು ದೇಶಪಾಂಡೆ, ಸರ್ವೋದಯ ಕಾರ್ಯಕರ್ತ ಶ್ರೀ ಅನಂತರಂಗಾಚಾರ್, ಯಸ್. ಯಸ್. ಪಿ. ಯ ಅಣ್ಣಾ ಹೇಮಾದ್ರಿ, ಶಿವಶರಣಪ್ಪ ಭೂಸನೂರು ಇವರೇ ಮೊದಲಾದವರ ನೇತೃತ್ವದಲ್ಲಿ—ಭಾರೀ ಕರಿಬಾವುಟ ಪ್ರದರ್ಶನ ನಡೆಸಿದರು. "ಮುಚ್ಚಿದ ಗಿರಣಿಯನ್ನು ತೆರೆಯಿರಿ. ಇಲ್ಲವೇ ಮುಖ್ಯಮಂತ್ರಿ ಪದವಿ ತ್ಯಜಿಸಿ" ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ಈ ಮತಪ್ರದರ್ಶನ ಮುಖ್ಯಮಂತ್ರಿಯವರು ತಂಗಿದ್ದ ಪ್ರವಾಸಿ ಮಂದಿರಕ್ಕೆ ಬಂತು.

ನಂತರ ಹತ್ತು ಮಂದಿಯ ನಿಯೋಗವೊಂದು ಮುಖ್ಯಮಂತ್ರಿಯವರಲ್ಲಿ ತೆರಳಿ ಮನವಿ ಪತ್ರವೊಂದನ್ನು ಒಪ್ಪಿಸಿತು.

ಕಾರ್ಖಾನೆಯನ್ನು ತೆರೆಯುವ ವಿಚಾರದಲ್ಲಿ ಸಚಿವರು ಏನೊಂದೂ ಭರವಸೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುವರಾಗಿ ಗೊತ್ತಾಗಿದೆ.

ಮುಖ್ಯ ಮಂತ್ರಿಯವರೊಡನೆ ಮಾತುಕತೆ ನಡೆಸಿದ ನಂತರ ನಿಯೋಗದ ನಾಯಕರು ಅಲ್ಲಿ ಸೇರಿದ್ದ ಭಾರೀ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಬೇಡಿಕೆಗಳು ಈಡೇರುವ ತನಕ ಹೋರಾಟವನ್ನು ಮುಂದುವರಿಸಲು ಕರೆ ನೀಡಿದರು.

ಬೋನಸಿಗಾಗಿ ಉಡುಪಿಯ ನೇಕಾರರ ಚಳವಳ

ಉಡುಪಿಯ ವಿಲಿಯಂ ಕರ್ಕಡ, ಲೆಮುವೆಲ್ ಕರ್ಕಡ ವೀವಿಂಗ್ ಫೆಕ್ಟರಿ, ಚಂದ್ರಶೇಖರ ಶೆಟ್ಟಿಗಾರ, ತಮ್ಮಣ್ಣ ಶೆಟ್ಟಿಗಾರ ಎಂಡ್ ಸನ್ಸ್, ವಿಜಯ ವೀವಿಂಗ್ ಫೇಕ್ಟರಿ ಈ ನೇಯ್ಗೆ ಕಾರ್ಖಾನೆಗಳಲ್ಲಿ 1964, 65, 66 ಈ ವರುಷಗಳ ಬಗ್ಗೆ ಕಾನೂನು ಪ್ರಕಾರ ಕೊಡಬೇಕಾಗಿರುವ ಬೋನಸ್ಸನ್ನು ಕೊಟ್ಟಿರುವುದಿಲ್ಲ. ಈ ಬಗ್ಗೆ ಉಡುಪಿ ತಾಲೂಕು ನೇಕಾರರ ಸಂಘ 1965ರಿಂದಲೇ ಒತ್ತಾಯಿಸುತ್ತಾ ಬಂದಿತ್ತು. ಲೇಬರ್ ಆಫೀಸರರು ಇಕ್ಕಡೆಯವರನ್ನೂ ಕರೆದು ಮಾತುಕತೆಗಳನ್ನು ನಡೆಸಿದರೂ ಮ್ಹಾಲಕರ ಗಳ ನಕಾರಾತ್ಮಕ ಧೋರಣೆಯಿಂದ ಮಾತುಕತೆ ವಿಫಲವಾಯಿತು.

ಕಳೆದ ತಾ. 1ರಂದು ವಿಲಿಯಂ ಕರ್ಕಡರ ನೇಯ್ಗೆ ಕಾರ್ಖಾನೆಯಲ್ಲಿ ದುಡಿಯುವ ಕೆಲಸಗಾರರ ಸಭೆಯೂ ತಾ. 4ರಂದು ವಿಜಯ ವೀವಿಂಗ್ ಫೇಕ್ಟರಿಯಲ್ಲಿ ದುಡಿಯುವ ನೇಕಾರರ ಸಭೆಯೂ ಉಡುಪಿ ತಾಲೂಕು ನೇಕಾರರ ಸಂಘದ ಅಧ್ಯಕ್ಷ ಶ್ರೀ ಐ. ಡಿ. ಜತ್ತನರ ಅಧ್ಯಕ್ಷತೆಯಲ್ಲಿ ಸೇರಿ ಈ ಕಾನೂನು ಪ್ರಕಾರ ಬೋನಸ್ ನಿರಾಕರಿಸುತ್ತಿರುವ ಈ ಮೆನೇಜ್‌ಮೆಂಟ್‌ಗಳ ನೀತಿಯನ್ನು ಖಂಡಿಸಿತು. ಆರಂಭದಲ್ಲಿ ಕಾರ್ಯದರ್ಶಿ ಶ್ರೀ ಕೆ. ಅಚ್ಚುತ ಇವರು ಸ್ವಾಗತಿಸಿದ್ದರು.

ಕಾನೂನು ಪ್ರಕಾರ ಬೋನಸ್ ಕೊಡದಿರುವ ಮ್ಯಾನೇಜ್‌ಮೆಂಟ್‌ಗಳ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಕಾನೂನು ಕ್ರಮವಹಿಸಬೇಕೆಂದು ಈ ಸಭೆಗಳು ಒತ್ತಾಯಿಸಿದುವಲ್ಲದೆ ಅನಿವಾರ್ಯವಾದಲ್ಲಿ ಬೋನಸ್ ಪಡೆಯಲುಬೇಕಾಗಿ ಮುಷ್ಕರ ಹೋರಾಟಕ್ಕೂ ಸಿದ್ಧರಿರಬೇಕೆಂದು ಸಭೆಯಲ್ಲಿ ಕೆಲಸಗಾರರಿಗೆ ಕರೆಕೊಡಲಾಯಿತು. ಶ್ರೀ ಸಿಂಪ್ಸನ್ ಸೋನ್ಸರು ಬೋನಸ್ ಹೋರಾಟದ ಇತಿಹಾಸವನ್ನು ವಿವರಿಸಿ ಕಾರ್ಮಿಕರ ಧೀರ್ಘ ಕಾಲದ ಹೋರಾಟದಿಂದ ನ್ಯಾಯೋಚಿತವಾದ ಈ ಬೋನಸ್ ಹಕ್ಕನ್ನು ಕಸಿದುಕೊಳ್ಳುವ ಮ್ಹಾಲಕರ ನೀತಿಯನ್ನು ಸೋಲಿಸಬೇಕೆಂದು ಕರೆ ನೀಡಿದರು.

೬೦ ತುಂಬಿದ ಕುಡ್ಪಿ ವಾಸುದೇವ ಶೆಣೈಯವರು

ಜಿಲ್ಲೆಯ ಹಿರಿಯ ಪತ್ರಿಕೋದ್ಯಮಿಗಳಲ್ಲೊಬ್ಬರೂ, ಪ್ರಸಿದ್ಧ ನಾಟಕಗಾರರೂ ಕತೆಗಾರರೂ, ವಿಮರ್ಶಕರೂ ಆದ 'ಪ್ರಭಾತ' ಸಾಪ್ತಾಹಿಕದ ಸಂಪಾದಕ ಶ್ರೀ ಕುಡ್ಪಿ ವಾಸುದೇವ ಶೆಣೈಯವರಿಗೆ 60 ವರುಷ ತುಂಬಿದ್ದು, ಆ ಬಗ್ಗೆ ಅವರನ್ನು ಅಭಿನಂದಿಸಿ ನಾಟಕರಂಗ, ಸಾಹಿತ್ಯಕ್ಷೇತ್ರ, ಪತ್ರಿಕೋದ್ಯಮಗಳಿಗೆ ಅವರು ಮಾಡಿದ ಸೇವೆಯನ್ನು ಕಳೆದ ತಾ. 10ರಂದು ಸೇರಿದ ಸತ್ಕಾರ ಕೂಟವೊಂದರಲ್ಲಿ ಶ್ಲಾಘಿಸಲಾಯಿತು.

ಸಭಾಧ್ಯಕ್ಷತೆಯನ್ನು ಶ್ರೀ ಬೇಲಗದ್ದೆ ಅಪ್ಪಯ್ಯ ಇವರು ವಹಿಸಿದ್ದರು. ಶ್ರೀ ಕುಡ್ಪಿಯವರ ಬಹುಮುಖ ಚಟುವಟಿಕೆ, ವಿವಿಧ ಕ್ಷೇತ್ರಗಳಲ್ಲಿ ಅವರು ಗೈದ ಸೇವೆಗಳನ್ನು ಕೊಂಡಾಡಿ ಅವರಿಗೆ ಶುಭವನ್ನು ಕೋರಿ ಡಾ। ಯಂ. ಪಿ. ಪೈ, ಕೃಷ್ಣಗೋಪಾಲ್, ಬಿ. ವಿ. ಬಾಳಿಗ, ಕಾಕಾನ ರಾಮಚಂದ್ರ, ಶಾಲಿವಾಹನ್, ಬಿ. ಯಂ. ಇದ್ದಿನಬ್ಬ, ಯಸ್. ಮುಕುಂದ ರಾವ್. ದೇವದಾಸ ನ್ಯಾಕ್, ಬಾಲ್‌ಗೋಪಾಲ್, ಮೊದಲಾದವರು ಮಾತನಾಡಿದರು.

ಶ್ರೀ ಕುಡ್ಪಿ ವಾಸುದೇವ ಶೆಣೈಯವರು ಸಮಯೋಚಿತವಾಗಿ ಉತ್ತರಿಸಿದ ಬಳಿಕ ಅಧ್ಯಕ್ಷರ ಭಾಷಣ, ವಂದನಾರ್ಪಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

ಹರಿಜನ ಕೃಷಿ ಕಾರ್ಮಿಕರಿಗೇ ಭೂಮಿ ಕೊಡಿರಿ
ರಾಯಚೂರು ಕಮ್ಯುನಿಸ್ಟ್ ಪಾರ್ಟಿಯ ಮನವಿ

ಭಾರತ ಕಮ್ಯುನಿಸ್ಟ್ ಪಾರ್ಟಿಯ ರಾಯಚೂರು ಸಮಿತಿಯು ಸ್ಥಳೀಯ ತಹಶೀಲ್ದಾರರಿಗೆ ಮನವಿಯೊಂದನ್ನು ಅರ್ಪಿಸಿ ಗೊನ್ವಾರ್‌ನ ಹರಿಜನ ಕೃಷಿ ಕಾರ್ಮಿಕರ 28 ಕುಟುಂಬಗಳು ಕಳೆದ 3ರಿಂದ 11ವರುಷಗಳಿಂದ ತಮ್ಮ ಸ್ವಾಧೀನದಲ್ಲಿರಿಸಿ ಕೃಷಿ ಮಾಡಿಕೊಂಡು ಬಂದಿದ್ದ ಭೂಮಿಯನ್ನು ಅವರಿಗೇ ನೀಡಬೇಕೆಂದು ಒತ್ತಾಯಿಸಿದೆ. ಈ ಹರಿಜನ ಕುಟುಂಬಗಳು ಸುಮಾರು 72 ಎಕರೆ ಭೂಮಿಯನ್ನು ಕಳೆದ ಹಲವು ವರುಷಗಳಿಂದ ಕೃಷಿ ಮಾಡುತ್ತಾ ಬಂದಿದ್ದು ತೀರ್ವೆಯನ್ನು ಕೂಡಾ ತೆತ್ತಿದ್ದಾರೆ. ಈ ಭೂಮಿಯ ಅಭಿವೃದ್ಧಿಗಾಗಿ ಹಣವನ್ನೂ, ಶ್ರಮವನ್ನೂ ಸುರಿದಿದ್ದಾರೆ. ಹೀಗಿರುವ ಈ ಭೂಮಿಯನ್ನು ತಮಗೆ ದರ್ಖಾಸ್ತಿಗೆ ಕೊಡಬೇಕೆಂದು ಭೂಮಿಯುಳ್ಳವರೂ ಶ್ರೀಮಂತರೂ ಅರ್ಜಿ ಹಾಕಿದ್ದು, ಈ ಅರ್ಜಿಯಂತೆ ಶ್ರೀಮಂತರಿಗೆ ಈ ಭೂಮಿಯನ್ನು ಕೊಡದೆ ಈ ಬಡ ಹರಿಜನರಿಗೇ ನೀಡಬೇಕೆಂದು ಕಮ್ಯುನಿಸ್ಟ್ ಪಾರ್ಟಿಯು ಈ ಮನವಿಯಲ್ಲಿ ವಿನಂತಿಸಲಾಗಿದೆ.

— — — —

ಕಂದಾಯ ಸಚಿವರಿಗೆ ಉಡುಪಿ ತಾಲೂಕು ಗೇಣಿದಾರರ ಸಮಿತಿಯ ಮನವಿ

ಇತ್ತೀಚೆಗೆ ಮೈಸೂರಿನ ಕಂದಾಯ ಸಚಿವರು ಜಿಲ್ಲೆಗೆ ಆಗಮಿಸಿದ್ದಾಗ ಉಡುಪಿ ತಾಲೂಕು ಗೇಣಿದಾರ ಸಮಿತಿಯ ಪರವಾಗಿ ಮನವಿಯೊಂದನ್ನು ಶ್ರೀ ಬೈಕಾಡಿ ಶೀನಪ್ಪ ಶೆಟ್ಟರು ಒಪ್ಪಿಸಿದರು. ಈ ಮನವಿಯಲ್ಲಿ ಈಗಿರುವ ಭೂಶಾಸನದಲ್ಲಿ ಭೂಮ್ಹಾಲಕರಿಗೆ ಪರವಾದ ತಿದ್ದುಪಡಿ ಮಾಡಬೇಕೆಂಬ ಜಿಲ್ಲೆಯ ಶಾಸಕರ ಕೇಳಿಕೆಯನ್ನು ವಿರೋಧಿಸಲಾಗಿದ್ದು ಹೀಗೆ ತಿದ್ದುಪಡಿ ಮಾಡಿದರೆ ಅದರಿಂದ ಗೇಣಿದಾರರಿಗೆ ತುಂಬಾ ಹಾನಿಯಿದೆ ಎಂದು ಹೇಳಲಾಯಿತ್ತು. ಧಾರ್ಮಿಕ ಸಂಸ್ಥೆಗಳಿಗೆ ಭೂಕಾನೂನಿನ ಹಲವು ಪ್ರಕರಣಗಳಿಂದ ವಿನಾಯಿತಿ ನೀಡಲಾಗಿದ್ದು ಇದರಿಂದ ರೈತರಿಗೆ ಅನ್ಯಾಯವಾಗಿದೆ. ಆದುದರಿಂದ ಧಾರ್ಮಿಕ ಸಂಸ್ಥೆಗಳ ಗೇಣಿದಾರರಿಗೂ ನ್ಯಾಯ ಒದಗಿಸಬೇಕು ಎಂದೂ, ಭೂಶಾಸನದ ಪ್ರಕಾರ ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಅಲ್ಲಿನ ಅಧಿಕಾರಿಗಳು ನಿರ್ಣಯಿಸಿರುವ ಎಕ್ರೆವಾರು ಉತ್ಪನ್ನ ರೈತನು ಹೊಲದಲ್ಲಿ ಬೆಳೆಸುವ ಉತ್ಪನ್ನಕ್ಕೂ ಮಿಕ್ಕಿದೆ. ಇದರಿಂದ ಗೇಣಿದಾರ ವರ್ಗಕ್ಕೆ ತುಂಬಾ ಕಷ್ಟವಾಗಿದೆ. ಆದುದರಿಂದ ಇದನ್ನು ಸರಿಪಡಿಸಬೇಕು ಎಂದೂ, ಉಡುಪಿ, ಕುಂದಾಪುರ ತಾಲೂಕುಗಳಲ್ಲಿ ಕಾಲುವೆ ನೀರಿನ ಆಶ್ರಯದಿಂದ ಬೆಳೆ ಬೆಳೆಯುವ ಭೂಮಿ ಇದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ನಿರ್ಣಯಿಸಿದ್ದು, ಜಿಲ್ಲೆಯಲ್ಲಿ ಅಂತಹ ವರ್ಗದ ಭೂಮಿಯೇ ಇಲ್ಲವೆಂದೂ, ಅದುದರಿಂದ ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದೂ ಒತ್ತಾಯಿಸಲಾಗಿದೆ.

ವ್ಯಾಯಾಮ ಶಾಲೆಯ ವಾರ್ಷಿಕೋತ್ಸವ

ಶ್ರೀ ಬಾಲಾಂಜನೇಯ ವ್ಯಾಯಾಮ ಶಾಲೆಯ 14ನೇ ವರ್ಧಂತಿಯು ಶ್ರೀ ಪಿ. ಯಂ. ನಾರಾಯಣ ಮೂರ್ತಿ ಎಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. 10ರಂದು ಜರಗಿತು. ಆರಂಭದಲ್ಲಿ ಶ್ರೀ ದಾಮೋದರ ಬಾಳಿಗರು ಸ್ವಾಗತಿಸಿದರು. ಕಾರ್ಯದರ್ಶಿಯವರು ಒಂದು ವರುಷದ ವರದಿಯನ್ನೂ ಕೋಶಾಧಿಕಾರಿಯವರು ಲೆಕ್ಕಪತ್ರವನ್ನು ಸಭೆಯ ಮುಂದಿಟ್ಟರು.

ಸಭೆಯಲ್ಲಿ ಶ್ರೀ ದಾಮೋದರ ಬಾಳಿಗ, ಸೂಫಿ, ಶ್ರೀ ಗೋಪಾಲಕೃಷ್ಣ ಭಟ್, ರೋನಾಲ್ಡ್ ರಸ್ಕಿಂಞ, ಇವರ ಸಲಹೆ ಸೂಚನೆಯೊಂದಿಗೆ ವರದಿ ಸರ್ವಾನುಮತ

(6ನೇ ಪುಟ ನೋಡಿರಿ)

IN THE COURT OF THE
CIVIL JUDJE
MANGALORE (S. K.)

S. C. NO. 143/67

Aithu Hangsu & 4 others. Pltfs.
Sesu Hengsu & others, Defts.
To

Defendant No. 13 Dasappa
,, ,, 14 Kanthare children of Dombi,
,, ,, 15 Puttu
,, ,, 16 Appi
,, ,, 17 Venkamma
,, ,, 20 Gopala children of Sesu Hengsu.

Defendants No. 15 & 16 are residing in Surathkal Village and Defts. 13 & 14, 18 & 20 are residing at Kulai Village Mangalore Taluk. Defendent No. 21; Sampa, minor by guardian adlitem D-16 Appi. Defendant No. 24; Monappa s/o Damu Hengsu, residing at Baikampady Village Mangalore Tq. Defendent No. 25; Krishnappa s/o Parameshwari. Defendant No. 26; Hoovappa s/o Parameshwari, Defts No. 25 & 26 are residing at Babugudde Mangalore Town. Defendant No. 29; Ramayya s/o Sesu residing in Bombay at c/o Jai Hind Upahara Griha opposite Masjid Post office, Mandvi.

Notice is here by given to the above named defendts: that the suit filed by the plaintifs for recovering the arrears of mulgani rent from the defendants stands posted to 17—10—1967 for appearance of the above defendants before the above Court. If they fail to appear on that day they will be set exparte and the suit will be heard and decided in their absence.

(by Order of the court)

P. V. AITHALA
B. A. L. L. B.
Advocate for Pltfs.

Mangalore, 5-9-'67.

ಮಾತಿಗೆ-ಮಾತು

ಹಾವು ಸಾಯಲೂ ಬಾರದು— ಕೋಲು ಮುರಿಯಲೂ ಬಾರದು

ಮಧುರೈದಲ್ಲಿ ಜರಗಿದ ಎಡ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ಕೆಲವೊಂದು ಲಘು ಟೀಕೆಯ ಹೊರತಾಗಿ— ಚೀನಾದ ತಾತ್ವಿಕ ನಿಲುಮೆಯನ್ನೇ ಕಣ್ಣುಮುಚ್ಚಿ ಸ್ವೀಕಾರ ಮಾಡಿದೆ. ಇದರಲ್ಲಿ ಆಶ್ಚರ್ಯವೂ ಇಲ್ಲ. ಎಡ ಕಮ್ಯುನಿಸ್ಟ್ ಪಾರ್ಟಿ ಜನ್ಮತಾಳಿದ್ದೇ ಚೀನಿಯರ ತಾತ್ವಿಕ ನಿಲುವೆಯಿಂದ; ಆ ನಂತರ ಆ ಪಾರ್ಟಿಯ ಧೋರಣೆಯಾಗಲೀ, ಕೃತಿಯಾಗಲೀ, ಅದರ ಸ್ವಭಾವ, ತಂತ್ರ, ಪೌರುಷ ಪ್ರಕಟನೆಗಳಾಗಲೀ ಚೀನೀ ಮುಖಂಡರ ಧಾಟಿಯಲ್ಲೇ ಇರುವುದನ್ನು ನಾವು ಕಾಣುತ್ತೇವೆ.

ಚೀನೀ ನಿಲುಮೆಯನ್ನು ಎಡ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿ ಕೆಲವೆಡೆ ಲಘುವಾಗಿ ಟೀಕಿಸಿದೆ. ಹಾವು ಸಾಯಲೂ ಬಾರದು. ಕೋಲು ಮುರಿಯಲೂ ಬಾರದು ಎಂಬಂತೆ. ಆದರೆ ಈ ಟೀಕೆಯಲ್ಲಿ ತಮ್ಮ ಪಾರ್ಟಿಯೊಳಗೆ ಹಸ್ತಕ್ಷೇಪ ನಡೆಸುವ ಪಾರ್ಟಿ ಮುಖಂಡರನ್ನು ಬೈಯ್ಯುವ ಚೀನೀ ನಾಯಕರ ವಿರುದ್ಧ ಆತ್ಮರಕ್ಷಣೆಯ ಮಾತೇ ಹೆಚ್ಚು,

ಇಂದು ಚೀನಾದ ತಾತ್ವಿಕ ನಿಲುವೆ ಲೋಕಾದ್ಯಂತವಾಗಿ ಕಮ್ಯುನಿಸ್ಟ್ ಚಳವಳಿಯಿಂದ ಬೇರ್ಪಡುತ್ತಿರುವಾಗ—ಚೀನಾದ ಆಂತರಿಕ ಪರಿಸ್ಥಿತಿ ತೀರಾ ಹದಗೆಟ್ಟಿರುವಾಗ ಭಾರತದ ಎಡ ಕಮ್ಯುನಿಸ್ಟ್ ಮುಖಂಡತ್ವ ಮಾತ್ರ ಆ ನಿಲುಮೆಯನ್ನು ಸರಿ ಎಂದು ಒಪ್ಪುತ್ತಿರುವುದರಲ್ಲಿ ಮಹತ್ವವಿಲ್ಲದೆ ಇಲ್ಲ. ಮಾವೋರವರು ಇಲ್ಲಿನ ಎಡ ಕಮ್ಯುನಿಸ್ಟ್ ಮುಖಂಡರನ್ನು ಅಪರಾಧಿ ಸ್ಥಾನದಲ್ಲಿ ಇರಿಸಿದಾಗ ನಾವು ನಿರಪರಾಧಿಗಳು ನಮ್ಮನ್ನೇಕೆ ಶಿಕ್ಷಿಸುತ್ತೀರಿ ಎಂದು ಈ ಕೇಂದ್ರ ಸಮಿತಿಯ ನಿರ್ಣಯ ಹೇಳಿದಂತಿದೆ.

ಚೀನಿಯರ ತಪ್ಪು ತಾತ್ವಿಕ ನಿಲುಮೆಯಿಂದ ಅಂತರರಾಷ್ಟ್ರೀಕಯ ಕಮ್ಯುನಿಸ್ಟ್ ಚಳವಳಿಯಲ್ಲೂ ದೇಶದ ಕಮ್ಯುನಿಸ್ಟ್ ಚಳವಳಿಯಲ್ಲೂ ಉಂಟಾಗಿರುವ ಕಷ್ಟದಾಯಕ ಪರಿಸ್ಥಿತಿಗಳನ್ನೂ, "ಪರಿಷ್ಕರಣಾವಾದದ" ವಿರುದ್ಧ ಹೋರಾಡುವ ಹೆಸರಲ್ಲಿ, ಕಮ್ಯುನಿಸ್ಟ್ ಚಳವಳಿಯನ್ನು, ಕಾರ್ಮಿಕ ಸಂಘಟನೆಗಳನ್ನು ಛಿದ್ರಗೊಳಿಸುವುದನ್ನೂ ಹಾಗೆಯೇ ನೆಲೆ ನಿಲ್ಲಿಸುವೆವು ಎಂದು ಈ ನಿರ್ಣಯ ತಿಳಿಸಿದೆಯಷ್ಟೆ !

ಉತ್ಪಲ್‌ದತ್ ಎಡ ಕಮ್ಯುನಿಸ್ಟ್ ಪಾರ್ಟಿಯ ಹೊರಗೆ

ಪ. ಬಂಗಾಲದಲ್ಲಿ ಶ್ರೇಷ್ಠ ನಾಟಕಗಾರ, ನಟರಲ್ಲೊಬ್ಬರೆಂದು ಹೆಸರಾದ ಉತ್ಪಲ್‌ದತ್- ಕಮ್ಯುನಿಸ್ಟ್ ಪಾರ್ಟಿ ಒಡೆದಾಗ ಎಡ ಕಮ್ಯುನಿಸ್ಟ್ ಪಾರ್ಟಿಯನ್ನು ಸೇರಿದ್ದರು. ಇವರ ಗುಣಗಾನ ಮಾಡಿ ಐಕ್ಯರಂಗವೇ ಬರೆದಿತ್ತು. ಆದರೆ ಉತ್ಪಲ್‌ದತ್ ಎಡ ಕಮ್ಯುನಿಸ್ಟ್ ಪಕ್ಷದ ಸದಸ್ಯನಲ್ಲವೆಂದೂ, ಅವರ ಕಲಾಮಂಡಳಿಯವರನ್ನು ತಮ್ಮ ಪಾರ್ಟಿಯ ಯಾವ ಸಮಿತಿಯೂ ಆಮಂತ್ರಿಸಕೂಡದೆಂದೂ, ಪ. ಬಂಗಾಲದ ಎಡ ಕಮ್ಯುನಿಸ್ಟ್ ಪಾರ್ಟಿಯು ಸರ್ಕಲಾರ್ ಹೊರಡಿಸಿದೆ. ಶ್ರೀ ಉತ್ಪಲ್‌ದತ್ ಇದೀಗ ಅತಿರೇಕವಾದಿಗಳೊಡನಿದ್ದಾರೆಂದು ಹೇಳಲಾಗಿದೆ.

ಎಡಕಮ್ಯುನಿಸ್ಟ್ ಪಾರ್ಟಿಯಿಂದ ಮತ್ತೆ ಉಚ್ಚಾಟನೆ

ಎಡಕಮ್ಯುನಿಸ್ಟ್ ಪಾರ್ಟಿಯ ಪ. ಬಂಗಾಲದ ನಾಯಕರಾಗಿದ್ದ ಚಾರು ಮುಜುಮ್‌ದಾರರನ್ನು ಆ ಪಾರ್ಟಿಯಿಂದ ಹೊರಹಾಕಲಾಗಿದೆ. ನಕ್ಸಲ್ ಬಾರಿ ಎಡಕಮ್ಯುನಿಸ್ಟರ ಬೆಂಬಲಿಗರೆಂಬ ಕಾರಣದಿಂದ ಅವರನ್ನು ಪಾರ್ಟಿಯಿಂದ ಹೊರಹಾಕಿರುವುದಾಗಿದೆ.

ಈ ತನಕ ಪಶ್ಚಿಮ ಬಂಗಾಲದಲ್ಲಿ 44 ಮಂದಿ ಪ್ರಮುಖ ಎಡಕಮ್ಯುನಿಸ್ಟ್ ಮುಖಂಡರನ್ನು ಪಾರ್ಟಿಯಿಂದ ಹೊರಹಾಕಲಾಗಿದೆ. ಈ ಬಾರಿ ಮುಜುಮ್‌ದಾರರೊಡನೆ ಡಾರ್ಜಿಲಿಂಗ್ ಜಿಲ್ಲಾ ಸಮಿತಿಯ ಸದಸ್ಯರಾದ ಪಿ. ಕೆ. ಭಾರದ್ವಾಜ್, ಸೌರೆನ್ ಬಸು ಇವರೂ ಮುರಶಾಬಾದ್‌ನ ದಿಲೀಪ್ ಬಾಗ್ಚಿ, ಅಸಾನ್ ಸೋಲ್‌ನ ಮಹದೇವ್ ಮುಖರ್ಜಿ ಇವರನ್ನೂ ಹೊರಹಾಕಲಾಗಿದೆ.

ಫಾರ್ವರ್ಡ್‌ಬ್ಲಾಕ್ ಆಫೀಸಿಗೆ ಧಾಳಿ

ಕಾರ್ಮಿಕರ ಯೂನಿಯನ್ ಆಫೀಸುಗಳ ಮೇಲೆ ಧಾಳಿ ನಡೆಸಿ ಬಲತ್ಕಾರದಿಂದ ಅವನ್ನು "ಸ್ವಾಧೀನ"ಪಡಿಸಿಕೊಳ್ಳುವುದು ಎಡ ಕಮ್ಯುನಿಸ್ಟರ ಹವ್ಯಾಸ. ಇದೀಗ ಸಂಯುಕ್ತರಂಗದ ಇತರ ಪಕ್ಷಗಳ ಕಛೇರಿಗಳ ಮೇಲೂ ಅವರು ಧಾಳಿ ನಡೆಸಲು ಹೊರಟಂತಿದೆ.

ಕಲ್ಕತ್ತ ಕಾರ್ಪರೇಶನಿನಲ್ಲಿ ಫಾರ್ವರ್ಡ್ ಬ್ಲಾಕ್‌ನ ಸದಸ್ಯರಾಗಿರುವ ಶ್ರೀ ಸೈವನ್ ಡೇ ಇವರು ಪೋಲಿಸರಿಗೆ ಕೊಟ್ಟಿರುವ ದೂರಿನಲ್ಲಿ ನರಿಕೇಲ್ಬಂಗ ಎಂಬಲ್ಲಿರುವ ತಮ್ಮ ಪಾರ್ಟಿಯ ಕಛೇರಿಯನ್ನು ಎಡ ಕಮ್ಯುನಿಸ್ಟರು ಧಾಳಿ ಮಾಡಿ ಬೆಂಕಿ ಕೊಟ್ಟರೆಂದೂ, ಕಛೇರಿಯಲ್ಲಿದ್ದ ಠಾಗೋರ್ ಸುಭಾಸ್ ಚಂದ್ರಬೋಸ್ ಇವರ ಭಾವಚಿತ್ರಗಳನ್ನು ಕಿತ್ತೆಸೆದಿದ್ದಾರೆಂದೂ ದೂರಿತ್ತಿದ್ದಾರೆ.

— ವಾಚಾಳಿ

ಕಮ್ಯುನಿಸ್ಟ್ ಪಾರ್ಟಿಯ ಪಾಂಡೇಶ್ವರ ಶಾಖೆಯ ಸಮ್ಮೇಲನ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಮಂಗಳೂರು ಪಾಂಡೇಶ್ವರ ಶಾಖೆಯ ಸಮ್ಮೇಳನವು ಕಳೆದ ತಾ. 10ರಂದು ಶ್ರೀ ಉಮಾನಾಥ ನ್ಯಾಕರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಯಲ್ಲಿ ಶಾಖೆಯ ಕಾರ್ಯದರ್ಶಿ ಬಿ. ರಾಜೀವ ಆಳ್ವರು ಕಳೆದ ಮೂರು ವರ್ಷಗಳ ಶಾಖೆಯ ಚಟುವಟಿಕೆಯ ವರದಿಯನ್ನು ಸಭೆಯ ಮುಂದಿಟ್ಟರು. ವರದಿಯ ಮೇಲೆ ಚರ್ಚೆ ನಡೆದು ಕೆಲವು ತಿದ್ದುಪಡಿಗಳೊಂದಿಗೆ ಅಂಗೀಕರಿಸಲಾಯಿತು. ಬಳಿಕ ಪಾರ್ಟಿಯ ತಾಲೂಕು ಸಮ್ಮೇಳನಕ್ಕೆ 2 ಜನ ಪ್ರತಿನಿಧಿಗಳನ್ನು ಚುನಾಯಿಸಲಾಯಿತು, ನಂತರ ಕಾರ್ಯದರ್ಶಿಯಾಗಿ ಬಿ. ರಾಜೀವ ಆಳ್ವರನ್ನೂ ಜತೆ ಕಾರ್ಯದರ್ಶಿಯಾಗಿ ಸಿ. ವಿ. ಶೆಣೈಯವರನ್ನು ಚುನಾಯಿಸಲಾಯಿತು. ಅಧ್ಯಕ್ಷರ ಭಾಷಣದ ನಂತರ ಸಭೆ ಮುಕ್ತಾಯವಾಯಿತು.

ಉರ್ವದಲ್ಲಿ ಬಸ್ ಅಪಘಾತ

ಒಬ್ಬರ ಮರಣ! ಇಬ್ಬರಿಗೆ ಗಾಯ

ಕಳೆದ ತಾ. 14ರಂದು ಪೂರ್ವಾಹ್ನ 8–15ರ ಹೊತ್ತಿಗೆ ಮೂವರು ಮಹಿಳೆಯರು ಎಂದಿನಂತೆ ತಮ್ಮ ಕಾರ್ಖಾನೆಗೆ ಕೆಲಸಕ್ಕೆ ಬರುತ್ತಿದ್ದರು. ಇನ್ನೇನು ತಮ್ಮ ಕಾರ್ಖಾನೆಗೆ ಎರಡು ಫರ್ಲಂಗ್ ಇದೆ ಎನ್ನುವಾಗ ಸಿಟಿಬಸ್ಸೊಂದು ಇದಿರಿನಿಂದ ಬಂದು ಒಮ್ಮಿಂದೊಮ್ಮೆಗೆ ಮಹಿಳೆಯನ್ನು ಬಲಿತೆಗೆದುಕೊಂಡು ಇಬ್ಬರನ್ನು ತೀವ್ರ ಗಾಯಗೊಳಿಸಿತು.

ದುರ್ಮರಣಕ್ಕೀಡಾದ ಮಹಿಳೆ ಶ್ರೀಮತಿ ಬಾಗಿ (50) ಎಂಬವರು. ತೀವ್ರ ಜಖಂಗೊಳಗಾದವರು ಶ್ರೀಮತಿ ವೆಂಕಮ್ಮ ಮತ್ತು ಲೀಲಾ ಎಂಬವರು. ಬಸ್ ನಂ. 31 ದಿನೇಶ್ ಮೋಟಾರು. ಬಸ್ ಬಿಡುತಿದ್ದವರು ಡ್ರೈವರ್ ಅಲ್ಲ— ಫಿಟ್ಟರ್ (ಇವರಿಗೆ ಡ್ರೈವಿಂಗ್ ಲೈಸನ್ಸ್ ಇಲ್ಲವೆಂದು ಹೇಳಲಾಗಿದೆ.) ಜಯ ಸವರ್ಣ ಎಂಬವರು.

ಡ್ರೈವರ್ ಕಾಫಿ ಕುಡಿಯುವ ವೇಳೆ ಪ್ರತಿ ದಿನವೂ ಬಸ್ಸನ್ನು ಶೇಡಿಗುರಿಗೆ ಕೊಂಡೊಯ್ದು ಹಿಂದೆ ತರುವ ಜವಾಬ್ದಾರಿ ಫಿಟ್ಟರರೆನ್ನಲಾಗಿದೆ. ಎಂದಿನಂತೆ ಅವರು ಈ ದಿನವೂ ಕೊಂಡೊಯ್ದಾಗ ಈ ದುರಂತ ಸಂಭವಿಸಿತು.

ಇಂದು ನಗರದಲ್ಲಿ ಆಗುತ್ತಿರುವ ಅಪಘಾತಗಳ ಸಂಖ್ಯೆ, ಅದರಲ್ಲೂ ಮುಖ್ಯವಾಗಿ ಬಸ್ ಅಪಘಾತಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಇದಕ್ಕೆ ಒಂದು ಕಾರಣ ಈ ಬಸ್‌ಗಳ ಓಡಾಟಗಳ ಸ್ಪರ್ಧೆಯಾದರೆ ಇನ್ನೊಂದು ಕಾರಣ ಹಳೆಯ—ಸದಾ ದುರಸ್ತಿಯಲ್ಲಿರುವ ಬಸ್‌ಗಳು. ನಂ. 31 ನೇ ಬಸ್ ಅಂತಹದರಲ್ಲೊಂದು. ಬಸ್‌ನೊಳಗೆ ದೀಪವಿಲ್ಲ. ಸದಾ ಮಾಲಿಕೊಂಡೇ ಅಪಾಯಕರ ರೀತಿಯ ಓಡಾಟ. ದಿನಕ್ಕೆ ನಾಲ್ಕು ಬಾರಿ ನಿಂತು ರಸ್ತೆಯ ಮಧ್ಯದಲ್ಲೇ ರಿಪೇರಿ. ಈ ಕಾರಣಗಳಿಂದ ಇಂತಹ ಅಪಘಾತಗಳು ಜಾಸ್ತಿಯಾಗುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಇಂತಹ ಬಸ್‌ಗಳಿಗೆ ಪರ್ಮಿಟು ಕೊಡುವಾಗ ಏಕೆ ಯೋಚಿಸುವುದಿಲ್ಲವೋ ನಮಗರ್ಥವಾಗುವುದಿಲ್ಲ.

ತಾ. 14ರ ಈ ಅಪಘಾತದಿಂದ ಒಂದು ಮರಣವಾಯಿತು. ಇಬ್ಬರಿಗೆ ಜಖಂ (ಶ್ರೀಮತಿ ವೆಂಕಮ್ಮ ಇವರ ಪರಿಸ್ಥಿತಿ ಚಿಂತಾಜನಕವಿದೆಯೆನ್ನಲಾಗಿದೆ.) ಆಯಿತು.

ಮೃತರ ಬಂಧುಗಳೊಂದಿಗೆ ಅರುಣ ತನ್ನ ಸಹತಾಪವನ್ನು ವ್ಯಕ್ತಪಡಿಸುತ್ತದೆ.

ತುಮಕೂರು: ಜನಪ್ರಿಯ ಬೇಡಿಕೆಗಳಿಗಾಗಿ ಹೋರಾಟ

ಬಹಳ ವರ್ಷಗಳಿಂದಲೂ ತುಮಕೂರಿನ ಪುರಸಭೆಯವರು ಟವನಿನ ಅಭಿವೃದ್ಧಿಗೂ, ಜನತೆಯ ಆವಶ್ಯಕತೆ ಮತ್ತು ಜನರ ಹಿತದೃಷ್ಟಿಗಳಿಗಾಗಿ ಏನೇನೂ ಕೆಲಸ ಮಾಡುತ್ತಿಲ್ಲ ಎಂಬುದು ಅನುಭವದಿಂದ ಎಲ್ಲರಿಗೂ ತಿಳಿದು ಬಂದಿದೆ. ಜನರಿಂದ ಚುನಾಯಿತರಾದ ಸದಸ್ಯರು ಪುರಸಭೆಗೆ ಹೋಗಿ– ವರುಷಕ್ಕೆ ಒಬ್ಬರಂತೆ ಅಧ್ಯಕ್ಷರಾಗಲು ಪೈಪೋಟಿ ನಡೆಸಿ, ಐಕ್ಯತೆಯನ್ನು ಸಾಧಿಸುವ ಬದಲು ಗುಂಪುಗಾರಿಕೆ, ಜಗಳಗಳಲ್ಲಿ ನಿರತರಾಗಿರುತ್ತಾ—ಊರಿಗಾಗಿ ಒಳ್ಳೇ ಕೆಲಸಗಳಾವುವನ್ನೂ ಸಾಧಿಸದೆ—ಪುರಸಭೆಯು ಇಂದು ವಿಫಲವಾಗಿದೆ. ತುಮಕೂರು ಟವನ್ ಕಮ್ಯುನಿಸ್ಟ್ ಪಕ್ಷವು ಇದೆಲ್ಲವನ್ನೂ ಗಮನಿಸಿ, 10 ಬೇಡಿಕೆಗಳ ಒಂದು ಕಾರ್ಯಕ್ರಮವನ್ನು ಜನತೆಯ ಪರವಾಗಿ ಮುಂದಿಟ್ಟು ಪುರಸಭೆ ಮತ್ತು ಸರಕಾರವು ಕೂಡಲೇ ಕಾರ್ಯಗತಗೊಳಿಸಬೇಕೆಂದು, ಸಾರ್ವಜನಕರಿಂದ ಸಹಿ ಸಂಗ್ರಹಿಸತೊಡಗಿದೆ.

ಮೋಟರು ಸಾರಿಗೆ ಮತ್ತು ಬೀಡಿ ಕೈಗಾರಿಕೆಗಳ ಕನಿಷ್ಟ ವೇತನ ಜ್ಯಾರಿ

ರಾಜ್ಯದ ಮೋಟರು ಸಾರಿಗೆಯ ವಿವಿಧ ಉದ್ಯೋಗಗಳ ಕೆಲಸಗಾರರಿಗೆ ಅಕ್ಟೋಬರ್ ತಾ. 1ರಿಂದ ಕೊಡಬೇಕಾಗಿರುವ ಕನಿಷ್ಟ ವೇತನದ ದರಗಳನ್ನೂ ಬೀಡಿ, ತಂಬಾಕು ಮತ್ತು ನಶ್ಯ ಕೈಗಾರಿಕೆಗಳ ಕೆಲಸಗಾರರಿಗೆ ಕೊಡಬೇಕಾಗಿರುವ ಕನಿಷ್ಟ ವೇತನದ ದರಗಳನ್ನೂ ಮೈಸೂರು ಸರಕಾರ ಈಗ ಪ್ರಕಟಿಸಿದೆ ಎಂದು ವರದಿಯಾಗಿದೆ.

(1ನೇ ಪುಟದಿಂದ)

ಈಗಲಾದರೂ ಒಪ್ಪಿರುವುದನ್ನು ಸ್ವಾಗತಿಸಿದ್ದಾರೆ !

ದೇಶದ ಸ್ವಾತಂತ್ರ್ಯವನ್ನು ಸಾಮ್ರಾಜ್ಯವಾದಿಗಳಿಗೆ ಒತ್ತೆಇಡುವ ಕಾಂಗ್ರೆಸ್ ಸರಕಾರದ ಈ ನೀತಿ, ಮೊರಾರ್ಜಿಯವರ ಈ ಹೇಳಿಕೆ ಖಂಡನೀಯವಿದೆ. ಒಂದೇ ಚೀನ ಅಸ್ತಿತ್ವದಲ್ಲಿರುವುದು. ಆ ಚೀನಾವನ್ನೇ ಭಾರತ ಮನ್ನಿಸುವುದು. ಇದರ ಹೊರತು ಭಾರತದ ಪ್ರತಿಗಾಮಿಗಳು ಚಿಯಾಂಗನ ಫಾರ್ಮೋಸವನ್ನು "ಸ್ವತಂತ್ರ" ದೇಶವೆಂದು ಕರೆಯುವುದಾದರೆ ಅದನ್ನು ನಮ್ಮ ದೇಶದ ಜನ ನಡೆಯಗೊಡರು.

IN THE COURT OF THE MUNSIF OF MANGALORE SOUTH KANARA

S. C. NO. 222 OF 1967

Between:

K. Sanjeeva Shetty — by his General Power of Attorney Holder Sri K. Sadashiva Shetty Plaintiff.

and

G. Panduranga Bhat, Defendant

To

G. Panduranga Bhat,
s/o G. Venkatesh Bhat,
Shop Keeper,
Opp. Bejai Cremation Ground,
Kavur Cross Road, Bejai,
Mangalore-4.

Please take notice that the above suit for recovering the rents filed against you, stands posted to 5-10-1967 for your appearance before the court at 11-00 A. M. If you fail to appear before the above court yor will be declared experte.

By order of the Court.

K. VENKAT RAO
Advocate for Petitioner.

Mangalore, 11-9-1967

ನೀತಿಗಳನ್ನು ಮಾರುವವರ ಧಾಳಿಗಳನ್ನೆದುರಿಸೋಣ

ಅದೊಂದು ಭಾರೀ ಧಾಳಿಯಾಗುತ್ತಿತ್ತು. ಈ ಧಾಳಿಯು ದೇಶವನ್ನು ರಕ್ಷಿಸುವಂತಹದಾಗಿತ್ತು. ವಿಫಲವಾಗಿರುವ ಆರ್ಥಿಕತೆಯನ್ನು ಗುಣಪಡಿಸುವಂತಹದಾಗಿತ್ತು. ಎಲ್ಲ ಗುತ್ತೇದಾರಿಗಳೂ, ಇಡಿಯ ಭಂಡವಳಶಾಹೀ ವರ್ಗವೇ ಕಳೆದ ಹಲವು ವರುಷಗಳಿಂದ ಇದಕ್ಕಾಗಿ ಒತ್ತಾಯಿಸುತ್ತಿತ್ತು. ಸುಪ್ರಸಿದ್ಧ ಆರ್ಥಿಕ ತಜ್ಞರು ತಮ್ಮ ಅಗಾಧ ಜ್ಞಾನ ಮತ್ತು ಆರ್ಥಿಕ ವಿಜ್ಞಾನಗಳಿಂದ ಇದನ್ನು ಬೆಂಬಲಿಸಿದ್ದರು. ಸರಕಾರವೂ ಈ ಕುರಿತು ಯೋಚಿಸುತ್ತಿತ್ತು. ರೂಪಾಯಿಯ ಬೆಲೆ ಕಡಿತದ ಬೆನ್ನಲ್ಲೇ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಕೂಡಾ ಈ ಕುರಿತು ಒಂದು ಕಾರ್ಯ ಸಾಧಿಸಲು ಯೋಚಿಸುತ್ತಿತ್ತು. ಅದೆಂದರೆ "ಸಂಬಳ ಮತ್ತು ತುಟ್ಟಿಭತ್ತೆ ಸ್ತಂಭನ".

ಆದರೆ ಹೀಗೆ ಮಾಡಲು ಅವರಿಗೊಬ್ಬ ಉಕ್ಕಿನ ಮನುಷ್ಯನ ಕರ್ತವ್ಯನಿಷ್ಠ ಹಾಗೂ ಧೈರ್ಯವಂತನ ಅಗತ್ಯವಿತ್ತು. ಇದನ್ನು ಹೇಳುವ ಕರ್ತವ್ಯನಿಷ್ಠ, ಹೇಳಿದಂತೆ ಮಾಡುವ ಧೈರ್ಯವಂತ. ಕಟ್ಟಕಡೆಗೆ ಅಂತಹ ವ್ಯಕ್ತಿಯನ್ನವರು ಕಂಡುಹಿಡಿದರು. ಇತಿಹಾಸದ ಕೊಳಕು ಬುಟ್ಟಿಯಲ್ಲಿದ್ದವನನ್ನು ಪುನರುತ್ಥಾನಗೊಳಿಸಿ ಆತನನ್ನು ಉಪ ಪ್ರಧಾನಿಯನ್ನಾಗಿ, ಆರ್ಥಿಕ ಸಚಿವನನ್ನಾಗಿ ಮಾಡಿದರು.

ಸರಕಾರದ ಕ್ರಮ

ದೇಶದ ಅತಿದೊಡ್ಡ ಮಾಲಕನಾಗಿರುವ ಕೇಂದ್ರ ಸರಕಾರ ತನ್ನ 20 ಲಕ್ಷ ನೌಕರರ ತುಟ್ಟಿಭತ್ತೆಯಲ್ಲಿ ಸ್ತಂಭನ ಮಾಡಲು ನಿರ್ಣಯಿಸಿತು. ತುಟ್ಟಿಭತ್ತೆ ಕೊಡಬೇಕೆಂದು ಶಿಫಾರಸು ಮಾಡಿದ್ದ ಗಜೇಂದ್ರ ಗಡ್ಕರ್ ಸಮಿತಿಯ ವರದಿಯನ್ನು ಪಾರ್ಲಿಮೆಂಟು ಅಧಿವೇಶನದಲ್ಲಿರುವಾಗ ಸ್ತಂಭನ ಮಾಡಲಾಯಿತು.

ಆಗ ಎಲ್ಲ ಗುತ್ತೇದಾರಿಗಳೂ, ಕೆಲ ರಾಜ್ಯಸರಕಾರಗಳಲ್ಲಿಯೂ ಇತರ ಕ್ಷೇತ್ರಗಳಲ್ಲಿಯೂ ಇರುವ ಭಂಡವಳಗಾರರ ಕೈಕೊಂಬೆಗಳೂ ಈ ಪ್ರತಿ ಕ್ರಾಂತಿ ಧಾಳಿಯನ್ನು ಒಂದೇ ಹೊಡೆತದಲ್ಲಿ ಸರಕಾರ ಮಾಡಬೇಕೆಂದು ಇಚ್ಛಿಸಿದರು.


ಹೀಗೆ ಸರಕಾರೀ ನೌಕರರ ಮಾತ್ರವಲ್ಲ ದೇಶದ ಎಲ್ಲ ಕೆಲಸಗಾರರ, ಎಲ್ಲರ ಸಂಬಳ ಮತ್ತು ತುಟ್ಟಿಭತ್ತೆಗಳಲ್ಲಿ ಸ್ತಂಭನ ಮಾಡಬೇಕೆಂಬ ಸೂಚನೆ ಮುಂದೆ ಬಂತು.

ಆದರೆ ಇದರಲ್ಲಿ "ಸಮಾನತೆ" ಮತ್ತು ಪ್ರಜಾಪ್ರಭುತ್ವ"ದ ನೋಟವನ್ನುಂಟು ಮಾಡುವುದಕ್ಕಾಗಿ "ಬೆಲೆ ಸ್ತಂಬನ ಡೆವಿಡೆಂಡ್ (ಲಾಭ) ಸ್ಥಂಭನವನ್ನೂ ಕೂಲಿ ಮತ್ತು ತುಟ್ಟಿಭತ್ತೆಗಳ ಸ್ತಂಭನದೊಂದಿಗೆ ಮಾಡಲಾಗುವುದೆಂದು ತಿಳಿಸಲಾಯಿತು. ಅವರಿಗೆ ಮುಖ್ಯಬೇಕಾದುದು ಸಂಬಳದ ಸ್ತಂಭನವಾಗಿತ್ತು!

ಆದರೆ ಈ ಎಲ್ಲ ಮಹಾನುಭಾವರು ಒಂದು ವಿಷಯವನ್ನು ಮರೆತಿದ್ದರು. ಈ ಸ್ತಂಭನೆಗಳನ್ನು ಮಾಡಲು ಭವಿಷ್ಯ ನಿರ್ಮಾಣದ ಉಕ್ಕಿನ ಮನುಷ್ಯನೊಬ್ಬನನ್ನು ಅವರು ಕಂಡು ಹಿಡಿದರೆ— ಅದಕ್ಕೆ ಪ್ರತಿಯಾಗಿ ಕಾರ್ಯಾಚರಣೆಯ ಉಕ್ಕಿನ ಮನುಷ್ಯನೊಬ್ಬನಿದ್ದಾನೆ, ಆತ ಸ್ತಂಭನೆಗಳನ್ನು ನಿರಾಕರಿಸುತ್ತಾನೆ. ಎಂಬುದನ್ನು ಅವರು ಮರೆತಿದ್ದರು. ಆ ಕಾರ್ಯಾಚರಣೆಯ ಆ ಉಕ್ಕಿನ ಮನುಷ್ಯನೇ ಉಕ್ಕಿನ ಹಸ್ತದಂತಹ ಧ್ಯೇಯ ದೃಢನಿರ್ಧಾರಗಳಿರುವ ಶಕ್ತಿಯುತವಾದ ಕಾರ್ಮಿಕ ವರ್ಗ.

ಎಲ್ಲ ಕೈಗಾರಿಕೆ, ಎಲ್ಲ ವೃತ್ತಿಗಳ ಎಲ್ಲ ಕಾರ್ಮಿಕರು; ಎಲ್ಲ ರಾಜ್ಯಗಳ ಎಲ್ಲ ಟ್ರೇಡ್ ಯೂನಿಯನ್‌ಗಳ ಎಲ್ಲ ಕಾರ್ಮಿಕರು ಎಲ್ಲ ಬಾವುಟಗಳ ಎಲ್ಲ ರಾಜಕೀಯ ಪಕ್ಷಗಳ ಎಲ್ಲ ಕಾರ್ಮಿಕರು, ಶೋಷಕ ವರ್ಗದ ಮತ್ತದರ ಸರಕಾರದ ಈ ಧಾಳಿಯನ್ನು ಹಿಮ್ಮೆಟ್ಟಿಸಲು ನಿರ್ಧರಿಸಿದರು. ಅದಕ್ಕಾಗಿ ಸಪ್ಟಂಬರ ತಾ. 11ರಂದು ಅಖಿಲ ಭಾರತ ವ್ಯಾಪಿಯಾಗ ಒಂದು ದಿನದ ಪ್ರತಿಷೇಧ ಮುಷ್ಕರ ನಡೆಸಲು ತೀರ್ಮಾನಿಸಿದರು. ನಿಜ ಅರ್ಥದಲ್ಲಿ ಅದು ಭಾರತ ಬಂದ್ ಆಗುತ್ತಿತ್ತು. ಏಕೆಂದರೆ ಯಾವುದೇ ಭಾರತ್ ಬಂದ್‌ನ ಮುಖ್ಯ ಅಂಗವಾಗಿರಬೇಕಾಗಿದ್ದ ರೈಲ್ವೇ ಕಾರ್ಮಿಕರೂ ಆ ದಿನದ ಮುಷ್ಕರಕ್ಕೆ ಸಿದ್ಧರಾರಿದ್ದರ .

ಆದರೆ ಬಡ ಗುಡ್ಡಕಾಡು ಜನರ ಬಿಲ್ಲುಬಾಣಗಳ ಇದಿರು ಗುಂಡು ಹಾರಿಸಬಲ್ಲ, ಹಾಗೂ ಬೇಕಷ್ಟು ಪಂಥಾಹ್ವಾನಗಳನ್ನು ನೀಡಬಲ್ಲ ಆ ಉಕ್ಕಿನ ಮನುಷ್ಯನೂ ಪುಟ್ಟಕಾಚಿನ ಮನುಷ್ಯನೂ ತಣ್ಣಗಾದರು. ಇಲ್ಲ—ಅವರು ಆ ವಿಷಯವನ್ನು ಕೆಲಸಗಾರರ ಮೇಲೆ "ಹೊರಿಸಲು" ಸಿದ್ಧರಿಲ್ಲ. ಶ್ರಮ ವಹಿಸಿ ದುಡಿಯುವ ನೀವು ಒಂದು ವರುಷದ ತನಕ ನಿಮ್ಮ ತುಟ್ಟಿಭತ್ತೆಯನ್ನು ತೆಗೆದುಕೊಳ್ಳದಿದ್ದರೆ, ಕಷ್ಟಪಟ್ಟು ದುಡಿಯುವ ಕೋಟ್ಯಾಧೀಶರು ಅದನ್ನು ನಿಮಗಾಗಿ ಮತ್ತು ಹೆಚ್ಚು ಉತ್ಪಾದನೆಗಾಗಿ ತಮ್ಮ ಕೈಗಳಲ್ಲಿಟ್ಟುಕೊಂಡರೆ ಎಂತೆಂತಹ ಅದ್ಭುತಗಳನ್ನು ಸಾಧಿಸಬಹುದು ಎಂಬುದಕ್ಕಾಗಿ ಅವರು ನಿಮ್ಮನ್ನು ದೇಶದ ಹೆಸರಲ್ಲಿ ವಿನಂತಿಸಿದ್ದಷ್ಟೆ!



— ಶ್ರೀ ಯಸ್. ಎ. ಡಾಂಗೆ —

ಆದರೆ ಇದು ಆ ನಿರ್ಮಲವಿಲ್ಲದ ಅಸಂಸ್ಕೃತ ವರ್ಗವಾದ ಬೃಹತ್ ಕಾರ್ಮಿಕ ವರ್ಗಕ್ಕೆ ಮನವರಿಕೆಯಾಗಲಿಲ್ಲ. ಏಕೆಂದರೆ ಅರ್ಥಶಾಸ್ತ್ರ, ಹಣ, ಬೆಲೆಗಳ ವಿಜ್ಞಾನದಲ್ಲಿ ಅವರು ಯಾವ ತಿಳಿವಳಿಕೆಯೂ ಇಲ್ಲದವರು. ಸಂಕುಚಿತ ಮತ್ತು ಸ್ವಾರ್ಥ ದೃಷ್ಟಿಯಿಂದ ಅವರು ಮಾತನಾಡಿದರು. ಯಾವ ಕೆಲಸವನ್ನು ಮಾಡದೆ ತಮ್ಮ ಸ್ವಂತ ಲಾಭಕ್ಕಾಗಿ ಬಿಕ್ಕಟ್ಟುಗಳನ್ನು ಮಾತ್ರ ಹೆಚ್ಚಿಸುವ ಕೆಲವು ಕಂಪೆನಿಗಳ ಡೈರೆಕ್ಟರುಗಳು ತಿಂಗಳಿಗೆ 12 ಸಾವಿರ ರೂ ಸಂಬಳ ಪಡೆಯುವಾಗ ಅವರ ಸಂಬಳದಲ್ಲಿ ನೀವೇಕೆ ಕಡಿತ ಮಾಡಲಿಲ್ಲ? ಎಂಬುದಾಗಿ ಅವರು ಈ ಮಹಾ ಆರ್ಥಿಕ ಸಚಿವರೊಡನೆ ಕೇಳಿದರು.

ತಾವು ಉದ್ಯೋಗದಲ್ಲಿದ್ದಾಗ ಸರಕಾರೀ ಕ್ಷೇತ್ರಕ್ಕೂ ರಾಷ್ಟ್ರೀಯ ಆರ್ಥಿಕತೆಗೂ ದ್ರೋಹ ಬಗೆದು ಖಾಸಗೀ ಕ್ಷೇತ್ರಕ್ಕೆ ಸಹಾಯ ಮಾಡಿದುದಕ್ಕೆ ಪ್ರತಿಫಲವಾಗಿ ತಾವು ನಿವೃತ್ತರಾದ ನಂತರ ಖಾಸಗೀ ಕಂಪೆನಿಗಳಲ್ಲಿ ಡೈರೆಕ್ಟರರಾಗಿ ತಿಂಗಳಿಗೆ 15ರಿಂದ 20 ಸಾವಿರ ರೂ. ವೇತನ ಪಡೆಯುವ ಮಾಜಿ ಆಡಿಟರ್ ಜನರಲ್ ಒಬ್ಬರು ಮತ್ತು ರೈಲ್ವೇ ಬೋರ್ಡಿನ ಮಾಜೀ ಸದಸ್ಯರುಗಳ ಕುರಿತು ಭವಿಷ್ಯ ನಿರ್ಮಾಣದ ಈ ಉಕ್ಕಿನ ಮನುಷ್ಯ ಎಂತಹ ಕ್ರಮಗಳನ್ನು ಕೈಗೊಂಡಿದ್ದಾರೆ ?

'ಭವಿಷ್ಯ ನಿರ್ಮಾಣ'ದ ಉಕ್ಕಿನ ಮನುಷ್ಯ

ದೇಶಾದ್ಯಂತ ಇಂತಹ ಸಾವಿರಾರು ಪ್ರಶ್ನೆಗಳು ಕೇಳಿಬಂದುವು. ಕೊನೆಗೆ ಭಾರತ ಬಂದ್‌ನ ಮಹಾ ಘೋಷಣೆ ಇಡಿಯ ದೇಶದಲ್ಲಿ ಪ್ರತಿಧ್ವನಿತವಾಯಿತು.

ಭಂಗವಳಶಾಹಿಯ ಈ ಮಹನೀಯರುಗಳು ಬಲಶಾಲಿಗಳು ಮತ್ತು ದುರ್ಬಲರು ಭವಿಷ್ಯದ ಭೂತವನ್ನು ಕಂಡರು ಸರಿ. 'ನಿಮ್ಮ ತುಟ್ಟಿಭತ್ತೆಯನ್ನು ತೆಗೆದುಕೊಂಡು ಮಣ್ಣು ತಿಂದು ಹೋಗಿ! ಆದರೆ ದಯವಿಟ್ಟು ನಿಷ್ಟ ಸ್ವಲ್ಪ ಹಣವನ್ನಾದರೂ— ನಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಲಿಕ್ಕಾಗಿ ನಮ್ಮಲ್ಲಿ ಇರಿಸಲಾರಿರಾ? ಆ ವರೆಗೆ ನಾವು ದಿವಾಳಿಯಾಗದೆ ಹೋದರೆ ಎಪ್ರಿಲ್ ತಿಂಗಳಿನಲ್ಲಿ ಈ ಹಣವನ್ನು ಮರುಪಾವತಿ ಮಾಡುವೆವು' ಎಂದರು.

ಇದಕ್ಕೆ ಉದಾರತೆಯಿಂದ ನೌಕರರು ಒಪ್ಪಿದರು ಏಕೆಂದರೆ ರಾಷ್ಟ್ರೀಯ ತುಟ್ಟಿಭತ್ತೆ ಸ್ತಂಭನವೆಂಬ ಮುಖ್ಯ ಧಾಳಿ, ಮುಖ್ಯ ಹೊಡೆತವು ಆಗಲೇ ಹಿಮ್ಮೆಟ್ಟಿತ್ತು.

ಕೇಂದ್ರ ಸರಕಾರೀ ನೌಕರರು ಹೋರಾಟದಲ್ಲಿ ವಿಜಯ ಗಳಿಸಿದರು. ಅದು ಅವರ ವಿಜಯ ಮಾತ್ರವಲ್ಲ ಎಲ್ಲ ದುಡಿಯುವವರ ವಿಜಯ.

ಸರಕಾರ ಈ ಪ್ರಶ್ನೆಯಲ್ಲಿ ಹಿಮ್ಮೆಟ್ಟಿದ್ದರಿಂದ, ತಮ್ಮ ಆಟ ಸೋತು ಹೋದುದರಿಂದ ಕೋಟ್ಯಾಧೀಶರ ಪತ್ರಿಕೆಗಳು ಸಿಟ್ಟಿದ್ದು ಹುಚ್ಚು ಹುಚ್ಚಾಗಿ ಕೂಗುತ್ತಿವೆ.

ಸಪ್ಟೆಂಬರ 11ರ ಮುಷ್ಕರವನ್ನು ಸಂಯುಕ್ತ ಕ್ರಿಯಾ ಸಮಿತಿ ಹಿಂದೆಗೆಯಿತು. ಆದರೆ ಇತರ ವಿಭಾಗದ ಕಾರ್ಮಿಕರ, ರಾಜ್ಯ ಸರಕಾರೀ ನೌಕರರುಗಳ, ಮತ್ತಿತರ ಕೈಗಾರಿಕಾ ಕೆಲಸಗಾರರ ಕುರಿತೇನು ?

ಅವರು ಅಂದು ಮೂರು ಕಾರಣಗಳಿಗಾಗಿ ಮುಷ್ಕರ ಹೂಡುವವರಿದ್ದರು. ಒಂದನೆಯದಾಗಿ ಕೇಂದ್ರ ಸರಕಾರೀ ನೌಕರರ ಬೆಂಬಲಾರ್ಥ. ಎರಡನೆಯದಾಗಿ ಈ ಸ್ತಂಭನ ಆರಂಭವಾದರೆ ಅದು ತಮಗೂ ತಟ್ಟುವುದು ಎಂಬುದಕ್ಕಾಗಿ. ಮೂರನೆಯದಾಗಿ ಅವರಿಗೂ ಕೆಲವೊಂದು ಪ್ರತ್ಯೇಕ ಕೇಳಿಕೆಗಳು ಆಹಾರ, ಬೋನಸ್, ರಿಟ್ರೇಚ್‌ಮೆಂಟ್, ಗಣಕೀಕರಣ—ಇತ್ಯಾದಿ ಕೇಳಿಕೆಗಳಿದ್ದುವು.

ಕೇಂದ್ರ ಸರಕಾರೀ ನೌಕರರ ತುಟ್ಟಿಭತ್ತೆಯ ಒಪ್ಪಂದವಾಗಿದ್ದು ಕಾರ್ಮಿಕ ವರ್ಗದ ಇತರ ಪ್ರಶ್ನೆಗಳು ಹಾಗೆಯೇ ಉಳಿದಿವೆ.

ಸರಕಾರ ಹಿಮ್ಮೆಟ್ಟಿದೆ—ಸೋಲಲಿಲ್ಲ

ಕೇಂದ್ರ ಸರಕಾರ ಹಿಮ್ಮೆಟ್ಟಿದೆಯೇ ಹೊರತು ಸೋಲಿಸಲ್ಪಡಲಿಲ್ಲ. ಈ ಕೇಂದ್ರ ಸರಕಾರವನ್ನು ಪದಚ್ಯುತಗೊಳಿಸಿ ಕಾಂಗ್ರೆಸೇತರ ಪ್ರಜಾಪ್ರಭುತ್ವವಾದೀ ಸಮ್ಮಿಶ್ರ ಸರಕಾರದ ರಚನೆಯಾಗುವ ತನಕ ಸರಕಾರಕ್ಕೆ ಅಂತಿಮ ಸೋಲೆಂದಾಗಲೀ ನಮಗೆ ಅಂತಿಮ ವಿಜಯವೆಂದಾಗಲೀ ಇಲ್ಲ.

ಶೋಷಕರ ಸರಕಾರ ಹೀಗೆ ಹಿಮ್ಮೆಟ್ಟಿರುವುದು ಕೂಡಾ ಅಂತಿಮವಲ್ಲ. ಆರ್ಥಿಕ ಮಂತ್ರಿಯವರು ಈ "ಸ್ತಂಭನ"ದ ಪ್ರಶ್ನೆಯನ್ನು ಸದ್ಯಕ್ಕಷ್ಟೇ ಮುಂದೆ ಹಾಕಿದ್ದಾರೆ.

ಆದರೆ ಇದಕ್ಕೆ ಮೋರಾರ್ಜಿದೇಸಾಯಿ ಒಬ್ಬರನ್ನು ದೂರಿ ಫಲವಿಲ್ಲ. ಈ 'ಸ್ತಂಭನೆ' ಎಂಬುದು ಇಡಿಯ ಸರಕಾರದ ಧೋರಣೆಯಾಗಿದೆ. ಹಣಕಾಸು ಮಾತನಾಡಿತು. ಇತರರು ತಲೆಯಾಲ್ಲಾಡಿಸಿದರು.

ಕಳೆದ ವರುಷ ಅಶೋಕ ಮೇಥಾ ಅಮೇರಿಕಾಕ್ಕೆ ಹೋಗಿ ಅಪಮೌಲ್ಯಕ್ಕೆ ರೂಪಾಯಿಯನ್ನು ಮಾರಿಬಂದರು. ಆ ಕೂಡಲೆ ಕೈಗಾರಿಕೆಗಳಲ್ಲಿ ಬಿಕ್ಕಟ್ಟು, ವಿದೇಶಿ ಭಂಡವಳಗಾರರಿಗೆ ನಿರ್ಯಾತದಲ್ಲಿ ಲಾಭ ಉಂಟಾಯಿತು. ಅಪಮೌಲ್ಯ ಎಂಬುದೇ ಕೆಲಸಗಾರರ ಭಾಗಶಃ ಕೂಲಿಕಡಿತ.

ಆ ಸಮಯದಲ್ಲಿ ಕೂಡಾ ಮೊರಾರ್ಜಿಯವರು ವೇತನ ಸ್ತಂಭನ ಮಾಡಬೇಕೆಂದೂ ಕೆಲಸದ ತಾಸುಗಳನ್ನು ಹೆಚ್ಚಿಸಬೇಕೆಂದೂ ಸೂಚಿಸಿದ್ದರು. ಇದಕ್ಕಾಗಿ ಸ್ವಲ್ಪ ಕಾಲ ಕಾಯಬೇಕೆಂದು ಅವರು ನಿರ್ಣಯಿಸಿದರು. ಆಗ ರಾಜಕೀಯ ಪರಿಸ್ಥಿತಿಯೇ ಮೂಲಭೂತವಾಗಿ ಬದಲಾಯಿತು.

ಚುನಾವಣೆಯಲ್ಲಿ ಕಾಂಗ್ರೆಸಿಗಾದ ಸೋಲು, ಚುನಾವಣಾ ನಂತರ 9 ರಾಜ್ಯಗಳಲ್ಲಿ ರಚಿತವಾದ ಕಾಂಗ್ರೆಸೇತರ ಸರಕಾರಗಳು, ಸಾಮೂಹಿಕ ಚಳವಳಿಗಳ ತೀವ್ರತೆಗಳು ಕಾಂಗ್ರೆಸಿನ ಒಳಗೇ ಇರುವ ಕೆಲವೊಂದು ಪ್ರಜಾಪ್ರಭುತ್ವವಾದಿಗಳಲ್ಲಿ ಸ್ವಲ್ಪ ಮಟ್ಟಿಗೆ ಪರಿಣಾಮವನ್ನುಂಟು ಮಾಡಿತು. ಶೋಷಕ ವರ್ಗವನ್ನೂ, ಇದರ ಕಾಂಗ್ರೆಸ್ ನಾಯಕತ್ವವನ್ನೂ ಕಷ್ಟಕ್ಕೆ ದೂಡಿತು. ಬ್ಯಾಂಕುಗಳ ರಾಷ್ಟ್ರೀಕರಣ, ರಾಜರುಗಳಿಗೆ ಕೊಡುವ ರಾಜಧನ, ಮತ್ತಿತರ ಸವಲತ್ತುಗಳ ರದ್ದತಿ ಬಿರ್ಲಾ ಗುತ್ತೇದಾರಿಯನ್ನು ಒಡೆಯಬೇಕು, ನಿಜವಾದ ಭೂಸುಧಾರಣೆ ತರಬೇಕು ಎಂಬಿತ್ಯಾದಿ ಕಾಂಗ್ರೆಸಿಗರೇ ಹೇಳಲಾರಂಬಿಸಿದರು.

ಹೀಗೆ ಈ ಧಾಳಿ ಬಲಗೊಳ್ಳುತ್ತಾ ಬಂತು. ಹೀಗಿರುವಾಗ ಜನರ ದೃಷ್ಟಿಯನ್ನು ಬೇರೆಡೆಗೆ ಸೆಳೆಯಲು ಬೇಕಾಗಿ, ಅವರ ಗಮ

[6ನೇ ಪುಟ ನೋಡಿರಿ]

ಪಂಚವಾರ್ಷಿಕ ಯೋಜನೆಗಳ ವಿಕಾಸದ ಒಂದು ನೋಟ

1917ರ ಅಕ್ಟೋಬರ್ ತಿಂಗಳಲ್ಲಿ ಕಾರ್ಮಿಕರು ಮತ್ತು ರೈತರು ಕೈಗೆ ಅಸ್ತ್ರಗಳನ್ನೆತ್ತಿಕೊಂಡು ಜಾರ್ ನಿರಂಕುಶಾಡಳಿತವನ್ನು ಕಿತ್ತೆಸೆದು ಸೋವಿಯೆತ್ ಪ್ರಭುತ್ವವನ್ನು ಸ್ಥಾಪಿಸಿದರು. ಆದರೆ ದೇಶದೊಳಗಡೆಯ ಭಂಡವಾಳ ವರ್ಗ ಮತ್ತು ಹೊರಗಡೆ ಸಂಯುಕ್ತ ರಾಜ್ಯ ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್‌ಗಳನ್ನೊಳಗೊಂಡ ಸಾಮ್ರಾಜ್ಯಕೋರ ರಾಜ್ಯಗಳು, ಶೋಷಕರಿಲ್ಲದ ಮತ್ತು ಜನ ತಮ್ಮ ಯಜಮಾನರು ತಾವೇ ಆದಂಥ ಜಗತ್ತಿನ ಈ ಮೊದಲನೇ ದೇಶವಾದ, ತರುಣ ಸೋವಿಯೆತ್ ಗಣರಾಜ್ಯವನ್ನು ಹಿಸುಕಿಹಾಕಲು ಪ್ರಯತ್ನಿಸಿದವು. ಸೋವಿಯೆತ್ ರಶಿಯ ಮೂರು ವರ್ಷಗಳ ಕಾಲ ಹಸ್ತಕ್ಷೇಪಕಾರಿ ವಿದೇಶಿ ಸೇನೆಗಳೊಡನೆ ಸೆಣಸಾಡಿ, ಈ ಕಠಿಣ ಯುದ್ಧದಲ್ಲಿ ವಿಜಯಿಯಾಗಿ ಮೇಲೆದ್ದಿತು.

ಮೊದಲನೇ ಜಾಗತಿಕ ಯುದ್ಧ ಮತ್ತು ಅಂತರ್ಯುದ್ಧದಿಂದ ದೇಶ ಬಡವಾಗಿ ಹಸಿವಿನಿಂದ ನರಳಿತು. ಹಸ್ತಕ್ಷೇಪದಿಂದ ದೇಶಕ್ಕೆ 36 ಸಹಸ್ರ ಮಿಲಿಯ ಚಿನ್ನದ ರೂಬಲುಗಳಷ್ಟು ನಷ್ಟ ಸಂಭವಿಸಿತ್ತು.

ಸೋವಿಯೆತ್ ಜನ ತಮ್ಮ ರಾಷ್ಟ್ರೀಯ ಸಾಂಪತ್ತಿಕತೆಯನ್ನು ಪುನರ್ವ್ಯವಸ್ಥೆಗೊಳಿಸಿ ಸಮಾಜವಾದೀ ಸಮಾಜವನ್ನು ಕಟ್ಟುವ ಕೆಲಸವನ್ನಾರಂಭಿಸಬೇಕಿತ್ತು. ಆರ್ಥಿಕ ಅಭಿವೃದ್ಧಿಯ ಹಾದಿಬದಿಗಳ ಬಗ್ಗೆ ಅನೇಕಾನೇಕ ಅಭಿಪ್ರಾಯಗಳಿದ್ದುವು. ಕೆಲವರು ಲಘು ಕೈಗಾರಿಕೆಗಳಿಗೇ ಪ್ರಾಧಾನ್ಯತೆ ನೀಡುವುದು ಅಗತ್ಯವಾಗಿದೆಯೆಂದೂ, ಇದರಿಂದ ಜನರಿಗೆ ಸಾಧ್ಯವಾದಷ್ಟು ಬೇಗನೆ ಅಗ್ಗದರದಲ್ಲಿ ಪದಾರ್ಥಗಳನ್ನು ಒದಗಿಸಲು ಸಾಧ್ಯವಾಗುವುದೆಂದೂ ಭಾವಿಸಿದರು. ಇನ್ನು ಕೆಲವರು ವಿದೇಶಿ ಭಂಡವಾಳಕ್ಕೆ ಹಾದಿ ಮಾಡಿಕೊಡಬೇಕೆಂದು ಸೂಚಿಸಿದರು–ಅಂದರೆ ರಶಿಯದ ಸಂಪತ್ತನ್ನು ನೋಡಿಕೊಳ್ಳಲು ವಿದೇಶಿ ಗುತ್ತೇದಾರರಿಗೆ ಹಕ್ಕು ನೀಡಬೇಕೆಂದೇ ಅರ್ಥ. ಆದರೆ ಇವೆರಡೂ ದೇಶದ ಸ್ವತಂತ್ರ ಆರ್ಥಿಕ ಬೆಳವಣಿಗೆಯನ್ನು ಭರವಸೆಗೊಳಿಸುತ್ತಿದ್ದಿಲ್ಲ. ಕಮ್ಯುನಿಸ್ಟ್ ಪಾರ್ಟಿಯು ಸಮಂಜಸವಾದಂಥ ಏಕೈಕ ಮಾರ್ಗವನ್ನು–ಸಂಪೂರ್ಣ ತಾಂತ್ರಿಕ ಮತ್ತು ಆರ್ಥಿಕ ಸ್ವಾತಂತ್ರ್ಯದ ಸಾಧನೆಗಾಗಿ, ದೇಶದ ಸ್ವಂತ ಕೈಗಾರಿಕೆಯ ಸರ್ವತೋಮುಖದ ಅಭಿವೃದ್ಧಿಗಾಗಿ ಸೂಚಿಸಿತು ಮತ್ತು ಮುಂದೆ ಇದೇ ಸರಿಯೆಂದು ವಸ್ತುಸ್ಥಿತಿಯಿಂದಲೇ ದೃಢಪಟ್ಟಿತು. 1922ರಲ್ಲಿ ವ್ಲದಿಮಿರ್ ಇಲ್ಯಿಚ್ ಲೆನಿನ್ "ಘನ ಕೈಗಾರಿಕೆಯನ್ನು ನಾವು ಉಳಿಸಿಕೊಳ್ಳದಿದ್ದರೆ, ಅದನ್ನು ಪುನರುಜ್ಜೀವನಗೊಳಿಸದಿದ್ದರೆ, ನಾವು ಯಾವೊಂದು ಕೈಗಾರಿಕೆಯನ್ನು ಕಟ್ಟಲೂ ಶಕ್ತರಾಗುವುದಿಲ್ಲ ಮತ್ತು ಅದಿಲ್ಲದೆ ನಾವು ಸ್ವತಂತ್ರ ದೇಶವಾಗಿಯೂ ಉಳಿಯುವುದಿಲ್ಲ" ಎಂದು ಸ್ಪಷ್ಟವಾಗಿ ಹೇಳಿದರು. ದೇಶವನ್ನು ಔದ್ಯೋಗೀಕರಣಗೊಳಿಸುವ ಬಗ್ಗೆ ಲೆನಿನರು ಮುಂದೆ ಮಾಡಿದ ಕಲ್ಪನೆಯೆ ಸಮಾಜವಾದೀ ಸಮಾಜ ರಚನೆಯಲ್ಲಿ ಸಾಮಾನ್ಯ ಧೋರಣೆಯಾಯಿತು.

ರಾಷ್ಟ್ರೀಯ ಸಾಂಪತ್ತಿಕತೆಯ ಸಮತೂಕದ ಬೆಳವಣಿಗೆಗಾಗಿ

ಆರ್ಥಿಕವಾಗಿ ಶೋಷಕ ವರ್ಗವನ್ನು ನಾಶಪಡಿಸುವುದು, ಮೂಲ ಉತ್ಪಾದನ ಸಾಧನಗಳನ್ನು (ಅಂದರೆ ಫ್ಯಾಕ್ಟರಿಗಳು, ಸ್ಥಾವರಗಳು, ರೇಲುಮಾರ್ಗಗಳು, ಭೂಮಿ ಮತ್ತದರ ಸಂಪತ್ತು) ರಾಷ್ಟ್ರೀಕರಣಗೊಳಿಸುವುದು, ಸರಕಾರೀ ಬ್ಯಾಂಕಿನ ಸ್ಥಾಪನೆ (ಹಣಕಾಸು ನೀಡಿಕೆಗೆ ಮತ್ತು ನಿಯಂತ್ರಣಕ್ಕೆ ಏಕೈಕ ಸಂಸ್ಥೆ ಇದೇ) ಮೊದಲಾದವೆಲ್ಲ ಸಮತೂಕದ ರಾಷ್ಟ್ರೀಯ ಸಾಂಪತ್ತಿಕ ಬೆಳವಣಿಗೆಗೆ ವಾಸ್ತವಿಕ ಅಗತ್ಯವಾಗಿವೆ.

ರಾಷ್ಟ್ರವ್ಯಾಪಿ ಪ್ರಮಾಣದಲ್ಲಿ ಯೋಜನೆಯನ್ನು ಕೈಕೊಳ್ಳುವುದೇ ಸಾರ್ವಜನಿಕ ಸಾಂಪತ್ತಿಕ ವ್ಯವಹರಣೆಗೆ ವಿವೇಚನಾಯುಕ್ತ ವಿಧಾನ ಎಂಬುದನ್ನು ಸಮಾಜವಾದೀ ನಿರ್ಮಾಣವು ತೋರಿಸಿಕೊಟ್ಟಿದೆ. ಇದನ್ನು ಸೋವಿಯೆತ್ ಸಂವಿಧಾನದ 11ನೇ ನಿಬಂಧನೆಯಲ್ಲಿ ಒಂದು ಶಾಸನವಾಗಿ ನಮೂದಿಸಲಾಗಿದೆ.

ಸೋವಿಯೆತ್ ಒಕ್ಕೂಟವು ತನ್ನ ಅಸ್ತಿತ್ವದ ಕಳೆದ ಅರ್ಧ ಶತಕದಿಂದ ಚಾಲ್ತೀ ಮತ್ತು ದೀರ್ಘಾವಧಿ ಯೋಜನೆಗಳ ಮೂಲಕ ಜನಜೀವನದ ಆಮೂಲಾಗ್ರ ಸುಧಾರಣೆಗೆ, ಸಮಾಜವಾದೀ ಉತ್ಪಾದನೆಯ ಸರ್ವತೋಮುಖವಾದ ಬೆಳವಣಿಗೆಗೆ ಮತ್ತು ಭಂಡವಾಳವಾದದ ಪರಿವೇಷನದಿಂದ ತನ್ನ ರಾಷ್ಟ್ರೀಯ ಸಾಂಪತ್ತಿಕತೆಯನ್ನು ಸ್ವತಂತ್ರವಾಗಿ ಉಳಿಸಿಕೊಳ್ಳಲು ಕಾರ್ಯ ಮಾಡುತ್ತ ಬಂದಿದೆ.

ಪ್ರಥಮ ಸೋವಿಯೆತ್ ಯೋಜನೆ

ಪ್ರಥಮ ಸೋವಿಯೆತ್ ಯೋಜನೆಯು ರಶಿಯದ ವಿದ್ಯುದ್ದೀಕರಣದ ಯೋಜನೆಯಾಗಿತ್ತು. 1920ರಲ್ಲಿ ಇದಕ್ಕೆ ಒಪ್ಪಿಗೆ ನೀಡಲಾಯಿತು. ಒಟ್ಟು 1.7 ಮಿ.ಲಿಯ ಕಿಲೊವಾಟ್ ಸಾಮರ್ಥ್ಯದ 30 ಪ್ರಧಾನ ವಿದ್ಯುಚ್ಛಕ್ತಿ ಸ್ಥಾವರಗಳನ್ನು 10–15 ವರ್ಷಗಳಲ್ಲಿ ನಿರ್ಮಿಸಬೇಕೆಂದು ಈ ಯೋಜನೆ ಕಲ್ಪಿಸಿತ್ತು. 15 ವರ್ಷಗಳಲ್ಲಿ ಈ ಯೋಜನೆ ಗುರಿಮೀರಿ ಶೇಕಡಾ 200ರಷ್ಟು ಹೆಚ್ಚಿತು, ಪೂರೈಸಲ್ಪಟ್ಟಿತು.

1927ರ ಅಂತ್ಯದ ಹೊತ್ತಿಗೆ ರಶಿಯದ ಹಾಳಾದ ಸಾಂಪತ್ತಿಕತೆ ಸಂಪೂರ್ಣ ಪುನರ್ ಸ್ಥಾಪನೆಗೊಂಡು ಕೈಗಾರಿಕಾ ಹುಟ್ಟುವಳಿಯು ಯುದ್ಧಪೂರ್ವದ (1913) ಮಟ್ಟವನ್ನು ಶೇಕಡಾ 13ರಷ್ಟು ಮೀರಿತ್ತು.

ಪ್ರಥಮ ಸೋವಿಯೆತ್ ಪಂಚವಾರ್ಷಿಕ ಯೋಜನೆಯಲ್ಲಿ (1928–1932) ಕೈಗಾರಿಕಾ ಅಭಿವೃದ್ಧಿಗೆ ಹೂಡಲಾಗಿದ್ದ ಮೊತ್ತದಲ್ಲಿ ಶೇಕಡಾ 78ರಷ್ಟು ಭಾಗವನ್ನು ಘನ ಕೈಗಾರಿಕೆಗಾಗಿ ಖರ್ಚು ಮಾಡಲಾಯಿತು. ಈ ಅವಧಿಯಲ್ಲಿ ಸೋವಿಯೆತ್ ಜನ 1500 ಪ್ರಮುಖ ಔದ್ಯೋಗಿಕ ಸಂಸ್ಥೆಗಳನ್ನು ಕಟ್ಟಿದರು. ಎಂಜನೀಯರಿಂಗ್ ಉದ್ದಿಮೆ 7 ಪಾಲು ಹೆಚ್ಚು ಬೆಳೆಯಿತಾದರೆ ಒಟ್ಟು ಕೈಗಾರಿಕಾ ಹುಟ್ಟುವಳಿಯು 1932ರಲ್ಲಿ, 1913ರರೊಂದಿಗೆ ಹೋಲಿಸಿದರೆ ಶೇಕಡಾ 267ರಷ್ಟು ಹೆಚ್ಚಿತ್ತು.

ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ (1933–1937) ಕೈಗಾರಿಕಾ ಹುಟ್ಟುವಳಿಯನ್ನು ಪ್ರಥಮ ಪಂಚವರ್ಷೀಯ ಯೋಜನಾವಧಿಯಲ್ಲಿ ಸಾಧಿಸಿದುದಕ್ಕಿಂತಲೂ ಮೂರುಪಾಲು ಹೆಚ್ಚು ಸಾಧಿಸಬೇಕೆಂದು ಗುರಿ ಹಾಕಿಕೊಳ್ಳಲಾಯಿತು. ಈ ಕಾರ್ಯಭಾರವನ್ನೂ ಯಶಸ್ವಿಯಾಗಿ ನಿಭಾಯಿಸಲಾಯಿತು. ಸುಮಾರು 4500 ಹೊಸ ಭಾರೀ ಸ್ಥಾವರಗಳೂ, ಫ್ಯಾಕ್ಟರಿಗಳೂ ವಿದ್ಯುಚ್ಛಕ್ತಿ ಕೇಂದ್ರಗಳೂ ಕಾಣಿಸಿಕೊಂಡವು. ಲಕ್ಷಾಂತರ ಸೋವಿಯೆತ್ ಜನರ ಶ್ರಮೋತ್ಸಾಹದಿಂದ, ನಿರ್ಮಾಣಶೀಲತೆಯಿಂದ, ತಾವು ಮಾಡುತ್ತಿರುವ ಈ ಕಾರ್ಯ ತಮಗಾಗಿಯೆ ಎಂಬ ಸಂಪೂರ್ಣ ಪರಿವೆಯಿಂದ ಮಾತ್ರವೇ ಇಂಥ ಒಂದು ಶೀಘ್ರ ಬೆಳವಣಿಗೆ ಸಾಧ್ಯವಾಯಿತು. ಈ ಅವಧಿಯಲ್ಲಿ ಕೈಗಾರಿಕೆ ಮತ್ತು ಕಛೇರಿ ಕೆಲಸಗಾರರ ವೇತನಗಳು ಇಮ್ಮಡಿಗಿಂತ ಹೆಚ್ಚಿದುವು.



ಮೊದಲ ನಿಯತಕಾಲೀನ ವಿಮಾನಯಾನ ಆರಂಭವಾದುದು 1923ರಲ್ಲಿ. ಮೋಸ್ಕೋದಿಂದ 450 ಕಿ. ಮೀ. ದೂರದ ನೊವ್ಗೊರೊಡ್ (ಇಂದಿನ ಗಾರ್ಕಿ) ನಗರಕ್ಕೆ. ನಂತರದ 44 ವರುಷಗಳಲ್ಲಿ ಸೋವಿಯೆತ್ ಆಕಾಶಯಾನ ಹಾದಿ 1000 ಪಾಲು ವೃದ್ಧಿಸಿದೆ. 500,000 ಕಿ. ಮೀ. ಆಕಾಶಯಾನದ ಹಾದಿಯಿದ್ದು ರಾಷ್ಟ್ರದ ನೂರಾರು ನಗರಗಳಿಗೆ ಸಂಪರ್ಕವಿಟ್ಟಿದೆ. 1966ರಲ್ಲಿ 4·8 ಕೋಟಿ ಮಂದಿ ವಿಮಾನಗಳಲ್ಲಿ ಪಯಣ ಬೆಳೆಸಿದ್ದರು. ಮೇಲಿನ ಚಿತ್ರ ಲೆನಿನ್‌ಗ್ರಾಡ್ ವಿಮಾನ ನಿಲ್ದಾಣದ್ದು.

ತೃತೀಯ ಪಂಚವಾರ್ಷಿಕ ಯೋಜನೆಯ (1938-1942) ಈಡೇರಿಕೆ ಮಾತ್ರ ನಾಜೀ ಜರ್ಮನಿಯು ಸೋವಿಯೆತ್ ಒಕ್ಕೂಟದ ಮೇಲೆ ವಿಶ್ವಾಸಘಾತುಕತನದಿಂದ ನಡೆಸಿದ ಹಲ್ಲೆಯಿಂದ ಭಂಗಗೊಂಡಿತು. ಹೀಗಾದಾಗಲೂ ತೃತೀಯ ಪಂಚವಾರ್ಷಿಕ ಯೋಜನಾವಧಿಯ ಮೊದಲ ಮೂರು ವರ್ಷಗಳಲ್ಲಿ 3,000 ಹೊಸ ಕೈಗಾರಿಕಾ ಸಂಸ್ಥೆಗಳು ಕಟ್ಟಲ್ಪಟ್ಟವು. ಔದ್ಯೋಗಿಕ ಉತ್ಪನ್ನದ ದೃಷ್ಟಿಯಿಂದ ಸೋವಿಯೆತ್ ಒಕ್ಕೂಟವು ಈ ಹೊತ್ತಿಗೆ ಯೂರೋಪಿನಲ್ಲಿ ಮೊದಲನೇ ಸ್ಥಾನವನ್ನೂ, ಜಗತ್ತಿನಲ್ಲಿ ಎರಡನೇ ಸ್ಥಾನವನ್ನೂ ಪಡೆದಿತ್ತು. ಸೋವಿಯೆತ್ ಒಕ್ಕೂಟವು ಬಂಡವಾಳವಾದೀ ದೇಶಗಳಿಂದ ಸಂಪೂರ್ಣ ಸ್ವತಂತ್ರವಾಗಿ, ಸ್ವತಂತ್ರವಾದ ಪ್ರಚಂಡ ಕೈಗಾರಿಕಾ ಶಕ್ತಿಯಾಗಿ ಪರಿವರ್ತನೆಗೊಂಡಿತ್ತು.

ಮಹಾ ದೇಶಾಭಿಮಾನೀ ಯುದ್ಧವು (1941-1945) ಹಿಟ್ಲರ್‌ಶಾಹಿಯನ್ನು ನಿರ್ಮೂಲಗೊಳಿಸುವಲ್ಲಿ ಮುಕ್ತಾಯಗೊಂಡಿತು. ಜರ್ಮನಿಯ ಮೇಲೆ ಸಾಧಿಸಿದ ಈ ವಿಜಯ ಸೋವಿಯೆತ್ ಕೈಗಾರಿಕೆ ಮತ್ತು ಯಂತ್ರಗಾರಿಕೆಯ ವಿಜಯವೂ ಆಗಿತ್ತು.

ಯುದ್ಧಾನಂತರದ 20 ವರ್ಷಗಳಲ್ಲಿ ಸೋವಿಯೆತ್ ಒಕ್ಕೂಟವು 14,900 ಕೈಗಾರಿಕಾ ಸಂಸ್ಥೆಗಳನ್ನು ಕಟ್ಟಿತು. 1954ರಲ್ಲಿ ಜಗತ್ತಿನ ಮೊಟ್ಟ ಮೊದಲನೇ ಅಣುಶಕ್ತಿ ಸ್ಥಾವರವು ಸೋವಿಯೆತ್ ಒಕ್ಕೂಟದಲ್ಲಿ ಕಾರ್ಯವನ್ನಾರಂಭಿಸಿತು. ಮುಂದೆ ಮೂರು ವರ್ಷಗಳಲ್ಲೇ ಸೋವಿಯೆತ್ ಒಕ್ಕೂಟವು ಪ್ರಪ್ರಥಮವಾಗಿ ಬಾಹ್ಯಾಂತರಿಕ್ಷದ ಅನ್ವೇಷಣೆಗೆ ತೊಡಗಿತು. ಈ ಸಾಧನೆಗಳು ಮತ್ತೊಮ್ಮೆ ಇಡೀ ಜಗತ್ತಿಗೆ ಸಮಾಜವಾದಿ ಉತ್ಪತ್ತಿ ವಿಧಾನವನ್ನಾಧರಿಸಿದ ಸೋವಿಯೆತ್ ಯೋಜನಾ ಪದ್ಧತಿಯ ವಾಸ್ತವಿಕತೆಯನ್ನೂ, ಪ್ರಚಂಡ ಚೇತನವನ್ನೂ ತೋರಿಸಿಕೊಟ್ಟಿತು.

ಶಿಕ್ಷಣ ಮತ್ತು ಸಿಬ್ಬಂದಿ ತರಬೇತು

ದೇಶದ ಔದ್ಯೋಗಿಕ ಅಭಿವೃದ್ಧಿಗೆ ನುರಿತ ಸಿಬ್ಬಂದಿಯ ತರಬೇತಿ ಅಗತ್ಯವಾಗಿತ್ತು. ಈ ಕಾರಣದಿಂದಲೇ ಪ್ರತಿಯೊಂದು ಪಂಚವಾರ್ಷಿಕ ಯೋಜನಾವಧಿಯಲ್ಲಿ ನಿರಕ್ಷರತೆಯನ್ನು ಮುಖ್ಯಾಂಶದಲ್ಲಿ ತೊಡೆದು ಹಾಕಲಾಯಿತು ಮತ್ತು ನಾಲ್ಕು ವರ್ಷಗಳ ಸಾರ್ವತ್ರಿಕ ಶಿಕ್ಷಣವನ್ನು ಕಡ್ಡಾಯವಾಗಿಸಲಾಯಿತು. ದ್ವಿತೀಯ ವಾರ್ಷಿಕ ಯೋಜನಾವಧಿಯಲ್ಲಿ ಏಳು ವರ್ಷಗಳ ಸಾರ್ವತ್ರಿಕ ಕಡ್ಡಾಯ ಶಿಕ್ಷಣಕ್ಕೆ ಪರಿವರ್ತನೆ ಮಾಡುವ ಗುರಿ ಇಟ್ಟುಕೊಳ್ಳಲಾಯಿತಾದರೆ ತೃತೀಯ ಪಂಚವರ್ಷೀಯ ಯೋಜನಾವಧಿಯಲ್ಲಿ ಪಟ್ಟಣ ಪ್ರದೇಶದಲ್ಲಿ 10 ವರ್ಷಗಳ ಸಾಮಾನ್ಯ ಸೆಕೆಂಡರಿ ಶಿಕ್ಷಣವನ್ನೂ, ಗ್ರಾಮಾಂತರ ಪ್ರದೇಶದಲ್ಲಿ ಏಳು ವರ್ಷಗಳ ಶಿಕ್ಷಣವನ್ನೂ ಆರಂಭಿಸಲಾಯಿತು.

(6ನೇ ಪುಟ ನೋಡಿರಿ)

ನೀತಿಗಳನ್ನು ಮಾರುವವರ ಧಾಳಿಗಳನ್ನೆದುರಿಸೋಣ !

(4ನೇ ಪುಟದಿಂದ)

ನವನ್ನು ಕೂಲಿಯ ಆರ್ಥಿಕ ರಂಗಕ್ಕೆ ಎಳೆಯಲು ಬೇಕಾಗಿ ಈ ಸ್ತಂಭನದ ಧಾಳಿಯನ್ನಾರಂಭಿಸಿದ್ದು.

ಅವರ ಧಾಳಿಯನ್ನು ತಡೆದು ನಿಲ್ಲಿಸಿ ಅವರನ್ನು ಹಿಮ್ಮೆಟ್ಟಿಸಿದೆವು. ಆದರೆ ಅವರು ಇದನ್ನು ಬಲಪ್ರತಿಗಾಮಿಗಳ ಕೈಗಟ್ಟಿ ಮಾಡಲು ಉಪಯೋಗಿಸುತಿದ್ದಾರೆ.

ಈ ಬಾರಿ ಅಶೋಕ ಮೇಥಾ ಅಲ್ಲ ಮೊರಾರ್ಜಿ ದೇಸಾಯಿಯವರು ಅಮೇರಿಕಾದ ಸಾಮ್ರಾಜ್ಯವಾದಿಗಳ ಮತ್ತದರ ಖಜಾನೆಧನಿಗಳೊಡನೆ ಮಾತುಕತೆಗಾಗಿ ತೆರಳಿದ್ದಾರೆ.

ಜಪಾನಿನಲ್ಲಿ ಅವರು ಆಗ್ನೇಯ ಏಸ್ಯಾದಲ್ಲಿ "ಕಮ್ಯುನಿಸಂನ್ನು ಇದಿರಿಸುವುದಕ್ಕಾಗಿ ದೆಹಲಿ ಟೋಕಿಯೋ ಒಪ್ಪಂದದಮಾಡಿಕೊಳ್ಳಲು ಯತ್ನಿಸಿದರು. ಯೆಸ್ಸೆನ್ ಎಂಬ ಹೆಸರಿಸಿ ಸೀಟೋ ಒಪ್ಪಂದ ಸ್ಥಾಪಿಸಲು ಹೆಣಗಿದರು. ಆದರೆ ಚಾಣಾಕ್ಷ ಜಪಾನಿಯರು ಇದಕ್ಕೊಪ್ಪಲಿಲ್ಲ. ಟೋಕಿಯೋದ ಮೂಲಕ ಅಮೇರಿಕ ಸಾಮ್ರಾಜ್ಯವಾದಿಗಳೊಡನೆ ಒಪ್ಪಂದ ಮಾಡಿಕೊಳ್ಳುವ ಈ ಎಸ್ಸೆನ್ ಒಪ್ಪಂದಕ್ಕೆ ಭಾರತ ಸರಕಾರ ಅಸ್ತು ಎನ್ನುವುದೇ? ಎಂಬುದೇ ಇಲ್ಲಿನ ಪ್ರಶ್ನೆ.

ಸ್ತಂಭನ ತಂತ್ರಗಳು ಇಲ್ಲಿ ವಿಫಲವಾದ ನಂತರ ಭಾರತ ಸರಕಾರ ಆರ್ಥಿಕ ಸಚಿವರನ್ನು ಬೇಡಿ ತಂತ್ರಗಳನ್ನು ನಡೆಸುವುದಕ್ಕಾಗಿ ಅಮೇರಿಕ್ಕಾಕ್ಕೆ ಕಳುಹಿಸಿದೆ. ಯಾವ ದಿಕ್ಕಿನಲ್ಲಿ. ಮೊದಲನೆಯದಾಗಿ ವಿದೇಶಾಂಗ ನೀತಿಯಲ್ಲಿ. ಅರಬರನ್ನು ನಾವು ಬೆಂಬಲಿಸಿದ್ದಕ್ಕೆ ಕ್ಷಮಿಸಿಬಿಡಿ ಎಂದು ಹೇಳುವುದಕ್ಕಾಗಿ, ಎರಡನೆಯದಾಗಿ ಹೆಚ್ಚು ಹೆಚ್ಚು ಡಾಲರ್ ಕೊಡಿ...ಯಾವುದಕ್ಕಾಗಿ?

ಯಾವುದಕ್ಕಾಗಿ ಎಂದರೆ ಅಂತರರಾಷ್ಟ್ರೀಯ ಆರ್ಥಿಕತೆಯಲ್ಲಿ ಅತ್ಯಂತ ಪ್ರತಿಗಾಮಿ ನೀತಿ ಅನುಸರಿಸುವುದಕ್ಕೆ. ನಿರ್ಬಂಧವಿಲ್ಲದ ಭಂಡವಳಶಾಹೀ ಬೆಳವಣಿಗೆ ನಿಯಂತ್ರಣವಿಲ್ಲದೆ ಮುಂದುವರಿಯುವುದು. ಹಿಂದಿನಂತೆ ಘನ ಕೈಗಾರಿಕೆಗಳನ್ನೇ ಸ್ಥಾಪಿಸಿ ಎಂಬ ಒತ್ತಾಯವಿಲ್ಲ. ಎರಡನೆಯದಾಗಿ ಬ್ಯಾಂಕ್ ಗುತ್ತೇದಾರರ, ಹಾಗೂ ಇತರ ಗುತ್ತೇದಾರರನ್ನು ನಾವು ಖಂಡಿತ ಮುಟ್ಟಲಾರೆವು. ಮೂರು, ರಾಜರುಗಳ ರಾಜಧನವನ್ನು ಸ್ವಲ್ಪ ಕಡಿಮೆ ಮಾಡಬಹುದು. ಆದರೆ ರಾಜ ವರ್ಗವನ್ನು ನಾವು ತೆಗೆದು ಹಾಕುವುದಿಲ್ಲ. ಅಮೇರಿಕಾ ಅಣು ಅಸ್ತ್ರ ಛತ್ರಿಯನ್ನು ಒದಗಿಸಿದ್ದಾದರೆ ಅದಕ್ಕೆ ಬದಲಾಗಿ ನಾವು ಸಮಾಜವಾದೀ ರಾಷ್ಟ್ರಗಳೊಡನೆ ಇರುವ ಸ್ನೇಹವನ್ನು ಸ್ತಂಭನಗೊಳಿಸುತ್ತೇವೆ. ಮತ್ತು ಬೆಳೆಯುತ್ತಿರುವ ಕಾರ್ಮಿಕ ಮತ್ತು ಪ್ರಜಾಪ್ರಭುತ್ವವಾದೀ ಚಳವಳಿಯ ವಿರುದ್ಧ ಕಠಿಣ ಕ್ರಮ ವಹಿಸುತ್ತೇವೆ!

ತಮ್ಮ ಈ ವಾಗ್ದಾನ ಯಥಾರ್ಥವಾದುದೆಂದು ಅಮೇರಿಕನರು ನಂಬುವಂತೆ ಮಾಡಲು ಬೇಕಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಬ್ಯಾಂಕ್ ಮತ್ತು ಜನರಲ್ ಇನ್ಶೂರೆನ್ಸ್‌ಗಳ ರಾಷ್ಟ್ರೀಕರಣ, ರಾಜಧನ ಕೊಡುವುದನ್ನು ನಿಲ್ಲಿಸುವಿಕೆ ಈ ಮೊದಲಾದ ಪ್ರಶ್ನೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಬಿಟ್ಟಿದೆ, ತಮ್ಮ ಸಂದೇಶವಾಹಕನಿಗೆ ಶುಭ ವಿದಾಯ ಬಯಸಲು ಬೇಕಾಗಿ ಅರಬ್ ಪರ ನೀತಿಯನ್ನು ಕಾಪಾಡುತಿದ್ದಂತಹ ವಿದೇಶಾಂಗ ಸಚಿವರನ್ನು ತಳ್ಳಿ ಬಿಟ್ಟಿದೆ.

ಈ ಭವಿಷ್ಯ ನಿರ್ಮಾಪಕನಾ ಉಕ್ಕಿನ ಮನುಷ್ಯ ಮಾಡುವ ಕಾರ್ಯಗಳೇ ಇವು. ಅವರಿಗೆ ಇಡಿಯ ಮಂತ್ರಿ ಮಂಡಲದ ಪೂರ್ಣ ಶಿರ್ವಾದವಿದೆ.

ಆದರೆ ಭಾರತದ ಜನತೆ ಈ ಎಲ್ಲ ಪ್ರತಿಗಾಮಿಗಳಿಗೂ ಒಂದು ಬೇರೆಯೇ ಭವಿಷ್ಯ ತೋರಿಸಿದ್ದಾರೆ. ಅದೆಂದರೆ ಇತಿಹಾಸದ ಕಸದ ಡಬ್ಬಿಯ ಭವಿಷ್ಯ.

ಕಾರ್ಮಿಕ ವರ್ಗದ ಭಾರತ ಬಂದ್, ಹೊಲಕ್ಕಾಗಿ, ಗೇಣಿಗಿದಿರಾಗಿ ರೈತರ ಕಾರ್ಯಾಚರಣೆಗಳೆಂಬ ಇಕ್ಕುಳಕ್ಕೆ ಎಲ್ಲ ಪ್ರಜಾಪ್ರಭುತ್ವವಾದಿಗಳೂ ಬೆಂಬಲ ನೀಡಿದ್ದೇ ಆದರೆ ಈ ಪ್ರತಿಗಾಮಿಗಳ, ಶೋಷಕರ ಆಳಿಕೆಯನ್ನು ಅದು ಕಿತ್ತುತೆಗೆದು ಅದನ್ನು ಆ ಕಸದ ಡಬ್ಬಿಗೆ ಹಾಕುವುದು. ಇದರ ಹೊರತು ಭಾರತದ ಜನತೆಗೆ ಮುಕ್ತಿಯೇ ಇಲ್ಲ.

ಮಹಾ ಕ್ರಾಂತಿಯ 50 ವರುಷಗಳು

(5ನೇ ಪುಟದಿಂದ)

ಸಮಾಜವಾದಿ ಆಧಾರದಲ್ಲಿ ವ್ಯವಸಾಯದ ಅಭಿವೃದ್ಧಿ

ಪಂಚವರ್ಷೀಯ ಯೋಜನೆಗಳು ಸಮಾಜವಾದದ ಆಧಾರದಲ್ಲಿ ವ್ಯವಸಾಯಾಭಿವೃದ್ಧಿಯನ್ನೂ ಕಲ್ಪಿಸಿದುವು. ನಮ್ಮ ಯಂತ್ರೋದ್ಯಮಗಳು ನಿರ್ಮಿಸಿದ ಟ್ರಾಕ್ಟರುಗಳು, ಸುಗ್ಗಿ ಯಂತ್ರಗಳು, ನೇಗಿಲುಗಳು ಮೊದಲಾದ ಕೃಷಿ ಯಂತ್ರೋಪಕರಣಗಳು ವ್ಯವಸಾಯವನ್ನು ಸಣ್ಣಸಣ್ಣ ಕುಟುಂಬ ಹಿಡುವಳಿಯಿಂದ ವಿಸ್ತೃತ ಸಾಮೂಹಿಕ ವ್ಯವಸಾಯಕ್ಕೆ ಪರಿವರ್ತನೆಗೊಳಿಸಲು ಸಹಾಯಕವಾದವು. ಇದರ ಫಲವಾಗಿ ಸುಮಾರು 25 ಮಿಲಿಯ ಸಣ್ಣ ಸಣ್ಣ ವೈಯಕ್ತಿಕ ವ್ಯವಸಾಯಗಳು 48 ಸಹಸ್ರದಷ್ಟು ಬಹುದೊಡ್ಡ ಯಾಂತ್ರೀಕೃತ ಸಾಮೂಹಿಕ ಮತ್ತು ರಾಜ್ಯ ಕೃಷಿ ಕ್ಷೇತ್ರಗಳಾಗಿ ಒಂದುಗೂಡಿಸಲ್ಪಟ್ಟವು. ರಾಷ್ಟ್ರೀಯ ಸಾಂಪತ್ತಿಕ ಯೋಜನೆ ಪ್ರಕಾರ ವರ್ಷವೊಂದಕ್ಕೆ ಸಹಸ್ರಾರು ಜನ ಕೃಷಿ ತಜ್ಞರನ್ನೂ, ಪಶುಸಂಗೋಪಕರನ್ನೂ, ಭೂಗುಣ ಪಂಡಿತರನ್ನೂ, ಯಂತ್ರ ಶಿಲ್ಪಿಗಳನ್ನೂ, ಕೃಷಿ ಯಂತ್ರಗಳ ಚಾಲಕರನ್ನೂ ತರಬೇತುಗೊಳಿಸಲಾಗುವುದು. ವ್ಯವಸಾಯದ ಮುನ್ನಡೆಗೂ, ಪಶುಸಂಗೋಪನೆಗೂ ಈಗ ರಾಸಾಯನಿಕಗಳನ್ನು ಬಹುದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದ್ದು, ವಿಜ್ಞಾನ ಮತ್ತು ಯಂತ್ರಕಲಾ ಶಾಸ್ತ್ರದ ಸಾಧನೆಗಳನ್ನೆಲ್ಲ ವ್ಯವಸಾಯದಲ್ಲಿ ಬಳಸಲಾಗುತ್ತಿದೆ.

ರಾಷ್ಟ್ರೀಯ ಸಾಂಪತ್ತಿಕತೆಯ ಯೋಜನಾಬದ್ಧ ಬೆಳವಣಿಗೆಯಿಂದ ಸೋವಿಯೆತ್ ಒಕ್ಕೂಟಕ್ಕೆ ತನ್ನ ದೇಶದ ಶ್ರಮಶಕ್ತಿಯನ್ನೂ, ವಸ್ತು–ಸರಕು–ಸಾಮಾಗ್ರಿಗಳನ್ನೂ ಮತ್ತು ನಿಸರ್ಗ ಸಂಪತ್ತಿಯನ್ನೂ ಅತ್ಯಂತ ವಿವೇಚನೆಯಿಂದ ಬಳಸಿಕೊಳ್ಳಲು ಸಾಧ್ಯವಾಗಿದೆ. ಇಂದು ಸೋವಿಯೆತ್ ಒಕ್ಕೂಟವು ಒಟ್ಟು ಜಾಗತಿಕ ಔದ್ಯೋಗಿಕ ಹುಟ್ಟುವಳಿಯಲ್ಲಿ ಶೇಕಡಾ 20ರಷ್ಟನ್ನು ಉತ್ಪಾದಿಸುತ್ತದೆ. ಕ್ರಾಂತಿಪೂರ್ವದ ರಶಿಯವು ಒಟ್ಟು ಜಾಗತಿಕ ಹುಟ್ಟುವಳಿಯಲ್ಲಿ ಕೇವಲ ಶೇಕಡಾ 4ರಷ್ಟನ್ನು ಮಾತ್ರವೇ ಉತ್ಪಾದಿಸುತ್ತಿತ್ತು ಎಂಬುದನ್ನು ಜ್ಞಾಪಿಸಿಕೊಳ್ಳುವುದು ಇಲ್ಲಿ ಉಚಿತವಾಗಿದೆ. ಸೋವಿಯೆತ್ ಒಕ್ಕೂಟವು ತನ್ನ ಅಸ್ತಿತ್ವದ 50 ವರ್ಷಗಳಲ್ಲಿ ಕೈಗಾರಿಕಾ ಹುಟ್ಟುವಳಿಯನ್ನು 66ಪಾಲು ಹೆಚ್ಚಿಸಿಕೊಂಡಿದೆ.

ಚಾಲ್ತೀ ಪಂಚವರ್ಷೀಯ ಯೋಜನಾವಧಿಯಲ್ಲಿ (1966–1970) ಸೋವಿಯೆತ್ ಕೈಗಾರಿಕಾ ಹುಟ್ಟುವಳಿಯು ಶೇಕಡಾ 47–50ರಷ್ಟು ಹೆಚ್ಚಬೇಕೆಂದು ಉದ್ದೇಶಿಸಲಾಗಿದೆ. ಈ ಯೋಜನೆಯು ಈಡೇರಿಕೆಯೆಂದರೆ ಕಮ್ಯುನಿಸಮಿನ ವಸ್ತು ಮತ್ತು ತಾಂತ್ರಿಕ ಬುನಾದಿಯ ನಿರ್ಮಾಣದಲ್ಲಿ ಇನ್ನೊಂದು ಭೀಮ ಹೆಜ್ಜೆ ಹಾಕಿದಂತೆ. ಇದರರ್ಥ ಜನರ ಜೀವನ ಕಲ್ಯಾಣದಲ್ಲಿ ಮತ್ತಿಷ್ಟು ಸುಧಾರಣೆ, ಸೋವಿಯೆತ್ ಜನರ ಸಾಂಸ್ಕೃತಿಕ ಮಟ್ಟಗಳಲ್ಲಿ ಮತ್ತಿಷ್ಟು ಏಳಿಗೆ.

[ಮುಂದಿನ ವಾರ: 50 ವರುಷಗಳ ಸೋವಿಯೆತ್ ವ್ಯವಸಾಯ.]

(2ನೇ ಪುಟದಿಂದ)

ದಿಂದ ಅಂಗೀಕರಿಸಲಾಯಿತು. ಶಾಲೆಯ ಅಧ್ಯಕ್ಷರಾದ ಶ್ರೀ ಸಂಜೀವ ಶೆಟ್ಟಿ ಶಾಲೆಯ ಶಿಕ್ಷಕರಾದ ಶ್ರೀ ಯಂ. ವಸಂತ ಶೆಟ್ಟಿ ಯಂ. ಸಿ. ಮೋಹನ್ ಇವರು ಮಾತನಾಡಿ ಸದಸ್ಯರ ಸಹಾಯವನ್ನು ಹಾರೈಸಿದರು.

ಮುಂದಿನ ವರ್ಷಕ್ಕೆ ಅಧ್ಯಕ್ಷರಾಗಿ ಕೆ. ಸಂಜೀವ ಶೆಟ್ಟಿ, ಉಪಾಧ್ಯಕ್ಷರಾಗಿ ಕೆ. ವಿಜಯ ಕುಮಾರ್, ಕಾರ್ಯದರ್ಶಿಯಾಗಿ ಎ. ಹರಿದಾಸ್ ಜತೆ ಕಾರ್ಯದರ್ಶಿಯಾಗಿ ಯಸ್. ಗಂಗಾಧರ್, ಕೋಶಾಧಿಕಾರಿಯಾಗಿ ಹೆನ್ರಿ ಮಿರಾಂದ. ಕಮಿಟಿಯ ಸದಸ್ಯರಾಗಿ ಸೂಫಿ, ಶ್ರೀನಿವಾಸ್ ಜೆ, ಸದಾನಂದ ಪ್ರಭು ಯಂ. ಸಿ, ಮೋಹನ್, ಇಬ್ರಾಹಿಮ್ ವಿಶ್ವನಾಥ್ ಸಾಲಿಯಾನ್, ಜನಾಬ್ ಅಬ್ದುಲ್ ರಿಫ್, ಮೇಕ್ಸಿ, ಮೋಹನ್ ಮತ್ತು ದಾಮೋದರ ಬಾಳಿಗ ಇವರನ್ನು ಚುನಾಯಿಸಲಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಟೋಟಗಳಲ್ಲಿ ಒಂದು ಕಾಲದಲ್ಲಿ ಮುಂದಿದ್ದ ನಮ್ಮ ದೇಶ ಇಂದು ಬಹಳ ಹಿಂದುಳಿದಿದೆ. ಸರಕಾರದ ಪ್ರೋತ್ಸಾಹದ ಕೊರತೆಯೇ ಇದಕ್ಕೆ ಕಾರಣ ಎಂದು ಹೇಳಿ ಇಂತಹ ವ್ಯಾಯಾಮ ಸಂಘಗಳು ಯಶಸ್ವಿಗೊಳ್ಳಬೇಕಾದರೆ ಉತ್ಸಾಹೀ ಯುವಕರು ಮುಂಬರಬೇಕು ಎಂದು ಕರೆಕೊಟ್ಟರು.

ಉತ್ತರ ಪ್ರದೇಶದ ಸರಕಾರೀ ನೌಕರರ ತುಟ್ಟಿಭತ್ತೆ ಹೆಚ್ಚಿತು

450 ರೂ.ಗಳಿಗಿಂತ ಕಡಿಮೆ ಸಂಬಳವಿರುವ ಉತ್ತರ ಪ್ರದೇಶ ಸರಕಾರದ ನೌಕರರ ತುಟ್ಟಿಭತ್ತೆಯನ್ನು ಹೆಚ್ಚಿಸಲು ಅಲ್ಲಿನ ಸರಕಾರ ನಿರ್ಣಯಿಸಿದೆ. ಕಳೆದ ಎಪ್ರಿಲ್ ತಿಂಗಳಿನಿಂದಲೇ ಈ ಹೆಚ್ಚಳವು ಜ್ಯಾರಿಗೆ ಬರುವುದು.

ಈ ತುಟ್ಟಿಭತ್ತೆಯ ಹೆಚ್ಚಳವು ಶಾಲಾ ಅಧ್ಯಾಪಕರಿಗೂ ಅನ್ವಯಿಸುವುದು.

ಈ ಹೆಚ್ಚಳದಿಂದಾಗಿ ಸರಕಾರಕ್ಕೆ ವರುಷ ಒಂದರ 10 ಕೋಟಿ ರೂ. ಹೆಚ್ಚು ವೆಚ್ಚ ತಗಲುವುದು.

ಕೇಂದ್ರ ಸರಕಾರೀ ನೌಕರರಿಗೆ ತುಟ್ಟಿಭತ್ತೆ ಹೆಚ್ಚಿಸಿರುವುದನ್ನು ಅನುಸರಿಸಿ ಈ ಹೆಚ್ಚಳ ಮಾಡಿರುವುದಾಗಿದೆ.

ಅರುಣದ

ಬಿಡಿ ಪ್ರತಿ 12 ಪೈಸೆ

ವಾರ್ಷಿಕ ಚಂದಾ ರೂ. 6-50

ಅರ್ಧ ವರ್ಷಕ್ಕೆ ರೂ. 3-25

ಚಾಗ್ಲಾ ರಾಜಿನಾಮೆ: ಭಾಷಾ ಪ್ರಶ್ನೆ

ಭಾಷೆಯ ಪ್ರಶ್ನೆಯಲ್ಲಿ ವಿದೇಶಾಂಗ ಸಚಿವ ಶ್ರೀ ಯಂ. ಸಿ. ಚಗ್ಲಾ ರಾಜಿನಾಮೆಕೊಟ್ಟಿದ್ದಾರೆ ಭಾರತ ಸರಕಾರದ ಅರಬ್-ಇಸ್ರಯೇಲ್ ಧೋರಣೆಯ ಕುರಿತಾಗಿ ಮತಭೇದದಿಂದ ಈ ರಾಜಿನಾಮೆ ಕೊಟ್ಟದ್ದಲ್ಲ ಎಂದು ಸ್ಪಷ್ಟ ಪಡಿಸಲಾಗಿದೆ.

ಅರಬ್ ರಾಷ್ಟ್ರಗಳೊಂದಿಗೆ ಭಾರತದ ಸ್ನೇಹವು ಅಮೇರಿಕನ್ ಸಾಮ್ರಾಜ್ಯವಾದಿಗಳ ಕೋಪಕ್ಕೆ ಪಾತ್ರವಾಗಿತ್ತು. ಜನಸಂಘ ಸ್ವತಂತ್ರ ಪಕ್ಷಗಳು ಈ ಧೋರಣೆಯಿಂದ ಸಿಟ್ಟಿಗೆದ್ದಿದ್ದುವು. ಕಾಂಗ್ರೆಸಿನ ನಾಯಕರೇ ಆಗಿರುವ ಯಸ್ಕೆ ಪಾಟೀಲರಂತೂ ಈ ನೀತಿಯನ್ನು ತೀವ್ರವಾಗಿ ದೂಷಿಸಿದರು. ಭಾರತದ ಉಪಪ್ರಧಾನಿಯವರು ಬಂದು ಈ ಕುರಿತು ತನಗೆ ಸ್ಪಷ್ಟತೆಯ ನೀಡದಿದ್ದರೆ ತಾನು ಗೋಧಿಯನ್ನು ಕಳುಹಿಸಲಾರೆ ಎಂಬುದಾಗಿ ಜಾನ್ಸನ್ ಭಯ ಹುಟ್ಟಿಸಿದ್ದರೆಂದು ಕೆಲವರು ಹೇಳುತ್ತಾರೆ.

ಈ ಪ್ರಶ್ನೆಯನ್ನು ಇನ್ನಷ್ಟು ಸ್ಪಷ್ಟಪಡಿಸಲೋ ಎಂಬಂತೆ ಛಾಗ್ಲ ರಾಜಿಕೊಟ್ಟಿದ್ದಾರೆ. ಮಾತ್ರವಲ್ಲ ಇವರ ರಾಜಿನಾಮೆಯನ್ನು ಮೊರಾರ್ಜಿಯವರು ಅಮೇರಿಕಾಕ್ಕೆ ಹೋಗುವ ಮುನ್ನವೇ ಸ್ವೀಕರಿಸಲಾಗಿದೆ. ಛಾಗ್ಲಾರು ಎತ್ತಿದ್ದ ಪ್ರತಿಯೊಂದು ಪ್ರಶ್ನೆಗೂ ಪ್ರಧಾನಿಯವರು ಉತ್ತರ ಕೊಡಬೇಕೆಂದಿದ್ದರು. ಆದುದರಿಂದಲೇ ಛಾಗ್ಲಾರ ಪತ್ರಕ್ಕೆ ಉತ್ತರ ಬರೆಯಲು ಐದು ದಿನಗಳು ಬೇಕಾದುವು ಎನ್ನಲಾಯಿತು.

ಆದರೆ ಅಷ್ಟರೊಳಗೇ ಛಾಗ್ಲರು ತನ್ನ ಪತ್ರವನ್ನು ಪತ್ರಿಕೆಗಳಿಗೆ ಪ್ರಕಟಿಸಿದರು. ಅವರು ಹೀಗೆ ಪ್ರಕಟಿಸಿದ ಮೇಲೆ ಅವರನ್ನು ಪುನ: ಮಂತ್ರಿ ಮಂಡಲದಲ್ಲಿ ತೆಗೆದು ಕೊಳ್ಳುವುದಾದರೂ ಹೇಗೆ? ಹಾಗೆ ಮಾಡಲಿಕ್ಕೆ ಅವರೇನು ಸಿ.ಸುಬ್ರಹ್ಮಣ್ಯಂರೆ?

ಈ ಐದು ದಿನಗಳನ್ನು ಪ್ರತಿಯೊಂದು ಪ್ರಶ್ನೆಗೂ ಉತ್ತರ ಕೊಡಲಿಕ್ಕಾಗಿ ಕಳೆಯಲಾಗಲಿಲ್ಲ. ಈ 5 ದಿನಗಳಲ್ಲಿ ವಿದೇಶಾಂಗ ಮತ್ತು ಆರ್ಥಿಕ ಪ್ರಶ್ನೆಗಳನನ್ನು ಚರ್ಚಿಸಲಾಯಿತು, ಹೀಗೆ ಚರ್ಚೆ ನಡೆದೇ ಆಳುವ ಈ ಕೂಟವು ಉದಾರವಾದಿ. ಪ್ರಾಮಾಣಿಕ, ಪ್ರಜಾಪ್ರಭುತ್ವವಾದೀ ಮನೋಭಾವದ ಈ ಸಚಿವನನ್ನು ಹೊರದಬ್ಬಿದ್ದು. ಛಾಗ್ಲಾ ಮಂತ್ರಿಮಂಡಲ ಬಿಟ್ಟು ಹೋದರೆಂದು ಎಲ್ಲ ಜಾತೀಯವಾದಿಗಳೂ, ಪ್ರತಿಗಾಮಿಗಳೂ ಆನಂದ ಪಡುತಿದ್ದಾರೆ!

ಈ ಹೊಸ ಭಾಷಾ ಪ್ರಶ್ನೆ ಎಂದರೇನು?

ಪ್ರಾದೇಶಿಕ ಭಾಷೆಗಳು ಆಯಾ ಪ್ರದೇಶಗಳಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಪ್ರಾಶಸ್ತ್ಯ ಪಡೆಯಬೇಕು. ಮಾಧ್ಯಮಿಕ ಶಿಕ್ಷಣದಲ್ಲಿ ಮಾತ್ರವಲ್ಲ ವಿಶ್ವವಿದ್ಯಾನಿಲಯದ ಶಿಕ್ಷಣದಲ್ಲೂ ಪ್ರಾಶಸ್ತ್ಯ ಪಡೆಯಬೇಕು.

ಹೀಗೆ ಮಾಡಿದರೆ ಪ್ರತಿಯೊಂದು ಪ್ರಾಂತದವರಿಗೂ ತಮ್ಮ ಸ್ವಂತ ಭಾಷೆಯಲ್ಲೇ ಆಡಳಿತೆ ನಡಸಲು ಸಾಧ್ಯ, ಪ್ರಜಾಪ್ರಭುತ್ವದ ಸದುಪಯೋಗವನ್ನು ಹೆಚ್ಚೆಚ್ಚಾಗಿ ಪಡೆಯಲು ಸಾಧ್ಯ ದೇಶದ ಐಕ್ಯತೆ ಸಾಧ್ಯ, ಎನ್ನುವಾಗಲೇ, ಸುಪ್ರೀಮ್‌ಕೋರ್ಟು ಅರ್ಥ ಮಾಡಿಕೊಂಡಂತೆ ಅದರ ನಿಯಮಗಳ ಐಕ್ಯತೆ ನಷ್ಟವಾಗುವುದು, ಇಂದು ಇಂಗ್ಲಿಷ್ ಭಾಷೆಯ ಮೂಲಕವೇ ಇರುವ ವಿಜ್ಞಾನದ ಬೆಳವಣಿಗೆಗೆ ತೊಂದರೆಯಾಗುವುದು ಎಂಬುದಾಗಿ ಇದನ್ನ ಆಕ್ಷೇಪಿಸುವವರು ಹೇಳುತ್ತಾರೆ.

ಹಿಂದಿಯು ಸಂಪರ್ಕ ಭಾಷೆಯಾಗಿ ಪ್ರಾದೇಶಿಕ ಭಾಷೆಯ ಬದಲಿಗೆ ನಿಲ್ಲಲಾರದು. ಅಂತಹ ಸಂದರ್ಭವಿನ್ನೂ ಪಕ್ವವಾಗಿಲ್ಲ. ಹಾಗಾದರೆ ಇಂಗ್ಲಿಷೇ ಉಳಿಯಬೇಕೆ ? ಇದನ್ನು ಯಾರೂ ಸ್ಪಷ್ಟವಾಗಿ ಹೇಳುವುದಿಲ್ಲ.

ಆದುದರಿಂದ ನಾವು ನಿಧಾನವಾಗಿ ಹೋಗಬೇಕು. ಹತ್ತು ವರುಷವೋ, 20 ವರುಷವೋ ಕಾಯಬೇಕು. ಹಿಂದಿಯು ಬಳಿಕೆಯಾಗಿ ಇಂಗ್ಲಿಷನ್ನು ಮರೆಯಲು ಅಷ್ಟು ಕಾಲವಾದರೂ ಬೇಕು.

ನಮ್ಮ ದೇಶದ ಐಕ್ಯತೆ ಪ್ರಜಾಪ್ರಭುತ್ವ ಸಂಸ್ಕೃತಿಗಳನ್ನು ಬೆಳೆಸಲು ಇದು ಸರಿಯಾದ ಹಾದಿಯೆಂದು ನಾವು ತಿಳಿಯುವುದಿಲ್ಲ.

ಚೀನೀಯರು ತಮ್ಮ ಭಾಷೆಯ ಹಿಂದುಳಿದಿರುವಿಕೆಯಿಂದ, ಅಥವಾ ಇಂಗ್ಲಿಷ್ ಭಾಷೆಯನ್ನು ಉಚ್ಚಾಟನೆ ಮಾಡಿದ್ದರಿಂದ ಯಾವುದೇ ತೊಂದರೆಗೊಳಗಾಗಿಲ್ಲ. ಇಂದವರು ಅಣುಬಾಂಬುಗಳನ್ನು ಕೂಡಾ ತಯಾರಿಸಿದ್ದಾರೆ. ಇಂಗ್ಲಿಷ್ ಭಾಷೆ ಮಾತ್ರವೇ ಆಧುನಿಕ ವಿಜ್ಞಾನದ ಮಾಧ್ಯಮವೆಂದು ಯಾರೂ-ಇಂಗ್ಲೆಂಡಿನವರು ಕೂಡಾ ಹೇಳುವುದಿಲ್ಲ.

ಇಂಗ್ಲಿಷರು ಬಂದು ನಮ್ಮನ್ನು ಆಳದೇ ಇರುತಿದ್ದರೆ ನಾವು ನಮ್ಮ ಭಾಷೆಯನ್ನೇ ಉಪಯೋಗಿಸುತಿದ್ದೆವು, ನಮ್ಮ ಭಾಷೆಯಲ್ಲೇ ಅಖಿಲ ಭಾರತ ತಳಹದಿಯಲ್ಲಿ ಭಾಷೆ ವಿಜ್ಞಾನ ಸಂಸ್ಕೃತಿಗಳನ್ನು ಅಭಿವೃದ್ಧಿಗೊಳಿಸುತಿದ್ದೆವು.

ಜನಸಾಮಾನ್ಯರಿಗೆಪ್ರಜಾಪ್ರಭುತ್ವವನ್ನು ವಿಸ್ತರಿಸಬೇಕಿದ್ದರೆ, ತಾವು ಆಡುವ ಭಾಷೆಯಲ್ಲಿ ಸರಕಾರದ ಆಡಳಿತ ಭಾಷೆಯು ಇದ್ದರೆ ಆಗ ರಾಜ್ಯಗಳಲ್ಲಿ ಆಯಾ ಭಾಷೆಗಳಿಗೇ ಮಾನ್ಯತೆ ಇರುವುದು.

ಕೇಂದ್ರ ಸರಕಾರದ ನೌಕರರಿಗೆ ಪ್ರತಿಯೊಂದು ರಾಜ್ಯದ ಜನಸಂಖ್ಯೆಯ ಆಧಾರದಲ್ಲಿ ಅಭ್ಯರ್ಥಿಗಳ ಆಯ್ಕೆ ನಡೆದರೆ ಇದರಿಂದ ಯಾವುದೇ ಪ್ರಾಂತವಾದರೂ ಕೇಂದ್ರದಲ್ಲಿ 'ಸರ್ವಾಧಿಕಾರ' ನಡೆಸುವ ಭಯವಿಲ್ಲ.

ಆದುದರಿಂದಲೇ ನನ್ನ ಈ ಭಾಷಾ ಪ್ರಶ್ನೆಯ ಪರಿಹಾರವಿರುವುದು ಗೊಂದಲದಲ್ಲೂ ಅಲ್ಲ, ಪರಸ್ಪರ ಜಗಳ ಹೊಡೆದಾಟದಲ್ಲೂ ಅಲ್ಲ. ಜನತೆಯ ಆಕಾಂಕ್ಷೆಗಳಿಗನುಸಾರವಾಗಿ, ಅಗತ್ಯತೆಗಳಿಗೆ ಹೊಂದಿಕೊಂಡು ಪ್ರಜಾಪ್ರಭುತ್ವವಿರಬೇಕು. ಕೇವಲ ಒಂದು "ಸಂಪರ್ಕಭಾಷೆ" ಇದ್ದೊಡನೇ ದೇಶದ ಐಕ್ಯ ಸ್ಥಾಪನೆಯಾಗುವುದಿಲ್ಲ. ಪ್ರಜಾಪ್ರಭುತ್ವ, ಸಮಾಜವಾದಗಳಿಂದ ಮಾತ್ರವೇ ನಿಜವಾದ ರಾಷ್ಟ್ರೀಯ ಐಕ್ಯವನ್ನು ಸಾಧಿಸಲು ಸಾಧ್ಯ. ಯಂ. ಸಿ. ಛಾಗ್ಲಾರು ರಾಜಿನಾಮೆ ಕೊಡುವ ಬದಲು ಅದಕ್ಕಾಗಿ ಅವರು ಮಂತ್ರಿಮಂಡಲದೊಳಗೆ ಹೋರಾಡಬಹುದಿತ್ತು.

— — — —

ಪಂಜಾಬದಲ್ಲಿ ಆಸ್ತಿ ತೆರಿಗೆ ರದ್ದು !

1970-71ರ ಒಳಗಾಗಿ ರಾಜ್ಯದಲ್ಲಿ ಈಗ ವಸೂಲಾಗುತ್ತಿರುವ ಆಸ್ತಿ ತೆರಿಗೆಯನ್ನು ಹಂತಹಂತವಾಗಿ ರದ್ದು ಪಡಿಸಲು ಪಂಜಾಬದ ಸಂಯುಕ್ತರಂಗ ಸರಕಾರ ನಿರ್ಣಯಿಸಿದೆ. ಈ ವರುಷದಿಂದಲೇ ಈ ರದ್ದತಿಯು ಆರಂಭವಾಗುವುದು. ಕಳೆದ ಎಪ್ರಿಲ್ ತಿಂಗಳಿನ ನಂತರ ನಗರಗಳಲ್ಲಿ ಕಟ್ಟಲ್ಪಟ್ಟ ಕಟ್ಟಡಗಳಿಗೆ ಸೊತ್ತು ತೆರಿಗೆ ಇಲ್ಲ. ವಸೂಲು ಮಾಡಿದ್ದರೆ ಅವನ್ನು ಹಿಂತಿರುಗಿಸಲಾಗುವುದು.

ಪಂಜಾಬದಲ್ಲಿ ವರುಷವೊಂದರ ಸುಮಾರು 79 ಲಕ್ಷ ರೂಗಳಷ್ಟು ಆಸ್ತಿ ತೆರಿಗೆ ವಸೂಲಾಗುತ್ತದೆ.

ಚೀನಾದಲ್ಲಿ ಕಮ್ಯುನಿಸ್ಟ್ ಪಾರ್ಟಿಯನ್ನು ನಿರ್ನಾಮ ಮಾಡಲಾಗಿದೆ !

"ಚೀನಾವುಹಿಂದುಳಿದ, ಅರೆವಾಳೆಯಗಾರೀಯಾಗಿದ್ದ ಹಾಗೂ ಎಷ್ಟೋ ಭಂಡವಾಳಶಾಹಿ ಮೂಲಗಳಿದ್ದ ದೇಶವಾಗಿತ್ತು. ಸಮಾಜವಾದವನ್ನುಕಟ್ಟಲು ಸಂಸ್ಕೃತಿ ಅಗತ್ಯವಾಗಿತ್ತು. ಆದರೆ ಚೀನಾದ ಇಂದಿನ ಸಾಂಸ್ಕೃತಿಕ ಕ್ರಾಂತಿಯು ಸ್ಥಳೀಯ ಪಾರ್ಟಿಯ ಕಾರ್ಯಕರ್ತರನ್ನು ನಿರ್ನಾಮಮಾಡುವುದಕ್ಕಾಗಿ ಉಪಯೋಗಿಸಲಾಗುತ್ತದೆ". ಎಂಬುದಾಗಿ ಜಪಾನಿ ಕಮ್ಯುನಿಸ್ಟ್‌ಪಾರ್ಟಿಯ ಮುಖಪತ್ರ "ಅಖಿಹಾಟ" ಬರೆಯುತ್ತದೆ.

ಚೀನೀ ಕಮ್ಯುನಿಸ್ಟ್ ಪಾರ್ಟಿ ನಾಯಕತ್ವವು'' ಎಡ ಅತಿರೇಕವಾದದ, ಸಂದರ್ಭ ಸಾಧಕ ಮಹಾ-ರಾಷ್ಟ್ರ ಎಂಬ ಭಾವನೆಯ ಮೂಲಗಳಿಂದ ತುಂಬಿದ್ದು ಅವರು ಜಪಾನೀ ನಾಯಕರಿಬ್ಬರಾದ ಸುನಾಮು ಮತ್ತು ಕೊನ್ನೋ ಇವರ ಮೇಲೆ ಪಿಕಿಂಗ್ ವಿಮಾನ ನಿಲ್ದಾಣದಲ್ಲಿ ಅಮಾನುಷ ಧಾಳಿ ನಡೆಸಿತು.

ಈ ಇಬ್ಬರು ಕಾಮ್ರೇಡರು ಚೀನಾದ ಪೀಪಲ್ಸ್ ಡೈಲಿಯ ಅತಿಥಿಗಳಾಗಿದ್ದರೂ ಕೂಡಾ ಅವರ ಮೇಲೆ ನಡೆದ ಧಾಳಿಯು ನಾಗರಿಕ ನಡತೆಯ ಪ್ರಾಥಮಿಕ ಸೂತ್ರಗಳನ್ನೂ ಕೂಡಾ ಉಲ್ಲಂಘಿಸಿದೆ. ಜಪಾನಿ ಕಮ್ಯುನಿಸ್ಟ್ ಪಾರ್ಟಿಯು ಪರಿಷ್ಕರಣಾವಾದೀ ಪಾರ್ಟಿ ಎಂದು ಆರೋಪಿಸಿ ಹೀಗೆ ಧಾಳಿ ನಡೆಸಿದ್ದಾಗಿದೆ ಎಂದೂ ಅಖಿಹಾಟ ಬರೆದಿದೆ.

ಕಳೆದ ವರುಷ ಪಿಕಿಂಗ್‌ನ ಆಮಂತ್ರಣದ ಮೇರೆಗೆ ಜಪಾನಿ ಕಮ್ಯುನಿಸ್ಟ್ ಪಾರ್ಟಿಯ ನಿಯೋಗವೊಂದು ಚೀನಾಕ್ಕೆ ತೆರಳಿತ್ತು. ವಿಯೆಟ್ನಾಮಿನಲ್ಲಿ ಸಾಮ್ರಾಜ್ಯವಾದಿಗಳ ವಿರುದ್ಧ ಅಂತರರಾಷ್ಟ್ರೀಯ ಸಂಯುಕ್ತರಂಗವನ್ನು ಕಟ್ಟಬೇಕೆಂದು ಅದು ಸಲಹೆ ನೀಡಿತ್ತು. ಆದರೆ ಈ ಬಗ್ಗೆ ಯಾವುದೆ, ಒಮ್ಮತಕ್ಕೆ ಬರಲಾಗಲಿಲ್ಲ.

ನಂತರ ಜಪಾನ್ ನಿಯೋಗವು ಸ್ವತ: ಮಾವೋತ್ಸೆತುಂಗರನ್ನು ಭೇಟಿಮಾಡಿತು. ಮಾವೋತ್ಸೆತುಂಗರು ನ್ಯಾಯಪರರೂ, ಗೌರವಿನ್ವತರೂ ಎಂದು ನಾವು ಭಾವಿಸಿವು. ಆದರೆ ಅವರು ನಮ್ಮ ನಿಯೋಗವನ್ನು ಅತ್ಯಂತ ತಿರಸ್ಕಾರದಿಂದ ಬರಮಾಡಿಕೊಂಡರು.

ಈ ಎರಡು ಪಾರ್ಟಿಗಳೂ ಜಂಟಿಹೇಳಿಕೆ ಹೊರಡಿಸುವ ವೇಳೆ ನಮ್ಮ ಮನವೊಲಿಸಲು ಚೀನಿ ನಾಯಕರು ಯತ್ನಿಸಿದರು. "ಯುದ್ಧಕ್ಕೆ ಹದರ ಬಾರದು" "ಜನರಿಂದ ಬೇರ್ಪಡುತ್ತೇವೆಂದೂ ಹೆದರಬಾರದು." ಎಂದರು ! ಎಂದೂ ಅಖಿಹಾಟ ಬರೆದಿದೆ.

150 ರೂಪಾಯಿ ಪರಿಹಾರ ಸಿಕ್ಕಿತು

ಹ್ಯೊಗೆ ಬಜಾರಿನಲ್ಲಿ ಸುವರ್ಣ ಸೋಮಿಲ್ಸ್‌ನಲ್ಲಿ ಕೆಲಸಗಾರನಾಗಿದ್ದ ಶ್ರೀ ರಾಮಚಂದ್ರ ಎಂಬ ಕೆಲಸಗಾರನನ್ನು ಕೆಲಸದಿಂದ ವಜಾಗೊಳಿಸಿರುವ ವಿವಾದದ ಕುರಿತು ಲೇಬರ್ ಆಫೀಸರರು ಪಂಚಾತಿಕೆ ನಡೆಸಿದರು. ರೂ.150 ಪರಿಹಾರ ಧನವನ್ನೂ, 1967ನೇ ವರ್ಷದ ಜುಲಾೖ ವರೆಗಿನ ರಜಾ ಸಂಬಳವನ್ನೂ 1967ನೇ ವರ್ಷದ ಬೋನಸನ್ನೂ ಕೊಡಲು ಮಾಲಿಕರು ಒಪ್ಪಿದ್ದರಿಂದ ವಿವಾದವು ರಾಜಿಯಲ್ಲಿ ತೀರ್ಮಾನವಾಗಿರುತ್ತದೆ. ಈ ವಿವಾದದಲ್ಲಿ ಕೆಲಸಗಾರನ ಕಡೆಯಿಂದ ಯುನೈಟೆಡ್ ವರ್ಕರ್ಸ್ ಯೂನಿಯನಿನ ಅಧ್ಯಕ್ಷ ಶ್ರೀ ಕೆ. ಮೋನಪ್ಪ ಶೆಟ್ಟರೂ ಮೆನೇಜ್‌ಮೆಂಟಿನ ಕಡೆಯಿಂದ ಎಡ್ವಕೇಟ್ ಶ್ರೀ ಕೆ. ಶಶಿಧರ ರಾಯರೂ ಹಾಜರಾಗಿದ್ದರು.

ಪೋಲಿಸ್ ಜೀಪಿಗೆ ಬೆಂಕಿ, ಹಿಂಸಾಚರಣೆಯ ಪರಮಾವಧಿ

-: ಗೋಳಿಬಾರಿನ ವಿಚಾರಣೆ ನಡೆಸಲು ಸರಕಾರದ ತೀರ್ಮಾನ :-

(1ನೇ ಪುಟದಿಂದ)

ಆರೈಸ್ಸೈಸ್ ಕಾಂಗ್ರೆಸಿಗರ ವಿಫಲ ಯತ್ನ

ಕಾಸರಗೋಡಿನಲ್ಲಿ ಸಂಯುಕ್ತರಂಗದ ಸ್ವಯಂಸೇವಕರು ವಿನಂತಿಯೊಂದಿಗೆ ಸಂಚರಿಸುತ್ತಿದ್ದಂತೆಯೇ ಜನಸಂಘ, ಆರ್. ಯುಸ್. ಯುಸ್., ಕಾಂಗ್ರೆಸ್ಸು ಕಾರ್ಯಕರ್ತರು ರಾಷ್ಟ್ರ ಧ್ವಜವನ್ನು ಹಿಡಿದುಕೊಂಡು, ಮುಚ್ಚಿದ್ದ ಅಂಗಡಿಗಳನ್ನು ತೆರೆಯಲು ಒತ್ತಾಯಿಸುತಿದ್ದರು. ಆದರೆ ಮುಚ್ಚಿದ್ದ ಒಂದು ಅಂಗಡಿಯನ್ನು ಕೂಡಾ ತೆರೆಯಿಸಲು ಅವರಿಗೆ ಸಾಧ್ಯವಾಗಲಿಲ್ಲ. ಸಂಯುಕ್ತರಂಗದ ಸ್ವಯಂಸೇವಕರ ಮುಂಜಾಗ್ರತೆಯಿಂದಲೂ, ಪರಮಾವಧಿ ಸಹನೆ ಶಿಸ್ತಿನಿಂದಾಗಿಯೂ ಬಂದ್ ವಿರೋಧಿಗಳು ಉಂಟುಮಾಡಲು ಪ್ರಯತ್ನಿಸುತಿದ್ದ ಗಲಭೆಗಳನ್ನು ತಪ್ಪಿಸಲು ಹೆಚ್ಚಿನ ಮಟ್ಟಿಗೆ ಸಾಧ್ಯವಾಯ್ತು.

ಸುಳ್ಳು ಸುದ್ದಿ ಪ್ರಚಾರ

ಬೆಳಿಗ್ಗೆ 10 ಗಂಟೆಗೆ ಸಂಯುಕ್ತರಂಗದ ಪ್ರಚಾರ ಕಾರ್ಯವು ಮುಕ್ತಾಯವಾಗಿ ಸ್ವಯಂಸೇವಕರು ಚದರಿದರು. 'ಬಂದ್'ನ ವಿಜಯವನ್ನು ಘರ್ಷಣೆ ಉಂಟುಮಾಡಲು ನಡೆಸಿದ ಶ್ರಮದ ವಿಫಲತೆಯನ್ನು ಕಂಡ ಜನಸಂಘ ಆರ್. ಯುಸ್. ಯುಸ್. ನೇತೃತ್ವ ಇತರ ರೀತಿಯಲ್ಲಿ ಸನ್ನದ್ಧರಾದರು. ಪ್ರಮುಖ ಆರ್. ಯುಸ್. ಯುಸ್. ಕಾರ್ಯಕರ್ತರೊಬ್ಬರು ಕಾರಿನಲ್ಲಿ ಅಲ್ಲಲ್ಲಿ ಧಾವಿಸಿ ಸುಳ್ಳು ಸುದ್ದಿಗಳನ್ನು ಹಬ್ಬಿಸಲು ಪ್ರಾರಂಭಿಸಿದರು. ಗಲಭೆಯಲ್ಲಿ ಆಸಕ್ತಿಯುಳ್ಳ ಜನವಿಭಾಗವನ್ನು ಉದ್ರೇಕಿಸುವುದೇ ಈ ಸುಳ್ಳು ಪ್ರಚಾರದ ಮುಖ್ಯ ಉದ್ದೇಶವಾಗಿತ್ತು. ಇದರ ಫಲವಾಗಿ ತಾಲೂಕು ಆಫೀಸಿನ ಮುಂದೆ ಆರ್. ಯುಸ್. ಯುಸ್. ಪ್ರೇರಿತ ಜನ ತಂಡ ಬಂದು ಸೇರತೊಡಗಿದರು. ಸಮೀಪದಲ್ಲಿದ್ದ ಮಸೀದಿಗೆ ಕಲ್ಲು ತೂರಾಟ ನಡೆಯಿತೆಂಬ ವಾರ್ತೆಯಿಂದ ಮಸೀದಿಯ ಮುಂಭಾಗದಲ್ಲಿ ಮುಸ್ಲಿಂ ತಂಡ ಬಂದು ಸೇರಿತು. ಸಮಯಕ್ಕೆ ಸರಿಯಾಗಿ ಮೂಲೆಯೊಂಬರಿಂದ ಗುಲ್ಲು ಪ್ರಾರಂಭವಾದ ಕೂಡಲೇ ಪರಸ್ಪರ ಕಲ್ಲುಗಳ ಸುರಿಮಳೆ ಪ್ರಾರಂಭವಾಯಿತು. ಜಾತೀಯ ಗಲಭೆ ಪ್ರಾರಂಭಿಸಬೇಕೆಂಬ ಪ್ರತಿಗಾಮಿಗಳ ದುರುದ್ದೇಶ ಫಲಕಾರಿಯಾಗುವ ಸನ್ನಿವೇಶ ಬಂದೊದಗಿತು. ಆ ಸಂದರ್ಭದಲ್ಲಿ ನಾನು ಮತ್ತು ನಮ್ಮ ಪಾರ್ಟಿಯ ಕಾಸರಗೋಡು ಶಾಖೆಯ ಯಂ. ಭಾಸ್ಕರನ್, ಈ ಎರಡು ತಂಡಗಳ ನಡುವೆ ಧಾವಿಸಿ ಅವರನ್ನು ಶಾಂತಗೊಳಿಸಲು ಪ್ರಯತ್ನಿಸಿದೆವು. ಕೆಲವೇ ನಿಮಿಷಗಳಲ್ಲಿ ಕಲ್ಲು ತೂರಾಟ ಕಡಿಮೆಯಾಗುತ್ತಾ ಬಂದುದನ್ನು ಕಂಡು ಕೆಲವರು ಪುನಃ ಗುಲ್ಲೆಬ್ಬಿಸಿ ಕಲ್ಲು ತೂರಾಟವನ್ನು ಪ್ರೋತ್ಸಾಹಿಸಿದರು. ಪರಿಸ್ಥಿತಿಯನ್ನು ಶಾಂತಗೊಳಿಸಲು ಧಾವಿಸಿದ ನಮಗಿಬ್ಬರಿಗೂ ಕಲ್ಲಿನ ಸುರಿಮಳೆಯಿಂದ ಗಾಯಗಳಾದುವು. ಇಷ್ಟರಲ್ಲೇ ಬಂದ ಪೋಲಿಸರು ಲಾಟಿಗಳನ್ನು ಬೀಸುತ್ತ ಎರಡು ಪಂಗಡಗಳನ್ನು ಚದರಿಸಲು ಶ್ರಮಿಸಿದರು. ಮುಸ್ಲಿಂ ತಂಡ ಚದರಿತು. ಆದರೆ ಆರ್. ಯುಸ್. ಯುಸ್, ಪ್ರೇರಿತ ತಂಡ ಪೋಲಿಸರ ಮೇಲೆ ಆಕ್ರಮಣ ಪ್ರಾರಂಭಿಸಿತು. ಕಲ್ಲುಗಳ ತೂರಾಟ ಭಯಂಕರವಾಗಿ ಸಾಗಿತು. ಇಷ್ಟರಲ್ಲೇ ದೇವಸ್ಥಾನದ ಸಮೀಪ ಸರಿದ ಈ ತಂಡ ಪೋಲಿಸ್ ಜೀಪನ್ನು ನಿಲ್ಲಿಸಿ, ಅದರಲ್ಲಿದ್ದವರನ್ನು ಹೊರಗೆಳೆದು ಮರ್ದಿಸಿದರು. ಪ್ರಾಣಭಯದಿಂದ ಅವರು ಜೀಪನ್ನು ಬಿಟ್ಟು ಓಡಿದ ಕೂಡಲೇ ಜೀಪನ್ನು ಪುಡಿಮಾಡಿ ಬೆಂಕಿ ಕೊಡಲಾಯಿತು. ಆಗ ಅಲ್ಲಿಗೆ ಮುಟ್ಟಿದ ಪೋಲಿಸ್ ವೇನ್ ಆಕ್ರಮಣಕ್ಕೆ ಒಳಗಾಯಿತು. ವೇನಿನೊಳಗೆ ಇದ್ದ ಪೋಲಿಸರು ಪ್ರಾರಂಭದಲ್ಲಿ ಒಳಗಿನಿಂದಲೂ, ಆ ನಂತರ ಹೊರಗೆ ಹಾರಿ ಗೋಳಿಬಾರು ನಡೆಸಿದರು. ಪರಿಣಾಮವಾಗಿ ಎರಡು ವಿದ್ಯಾರ್ಥಿಗಳು ಮೃತಪಟ್ಟುದು ಇದು ಶೋಚನೀಯ. ಆ ವಿದ್ಯಾರ್ಥಿಗಳ ಮರಣದಿಂದ ದುಃಖಿಗಳಾದ ಅವರ ಕುಟುಂಬದವರ ದುಃಖದಲ್ಲಿ ಕಮ್ಯುನಿಸ್ಟ್ ಪಾರ್ಟಿ ಸಂಪೂರ್ಣ ಪಾಲುಗೊಳ್ಳುತ್ತದೆ.

ಹಿಂದೂ ಮುಸ್ಲಿಂ ಹತ್ಯಾಕಾಂಡ ತಪ್ಪಿದ್ದರೂ ಪೋಲಿಸ್ ಮತ್ತು ಪುಂಡರ ಘರ್ಷಣೆ ತಪ್ಪಲಿಲ್ಲ. ಪೋಲಿಸ್ ಶಿಬಂಧಿಗಳು ಸಾಕಷ್ಟು ಸಂಖ್ಯೆಯಲ್ಲಿ ಬಂದು ತಕ್ಕ ಮುಂಜಾಗ್ರತೆಯನ್ನು ವಹಿಸುತ್ತಿದ್ದರೆ, ಮುಖಂಡರೆನ್ನಿಸಿಕೊಳ್ಳುವವರು ಜನರನ್ನು ಶಾಂತಗೊಳಿಸಲು ಶ್ರಮ ವಹಿಸುತ್ತಿದ್ದರೆ ನಮ್ಮ ಎರಡು ವಿದ್ಯಾರ್ಥಿಗಳು ಮರಣ ಪಡುತ್ತಿರಲಿಲ್ಲ. ಗೋಳಿ ಬಾರಿನ ನ್ಯಾಯಾನ್ಯಾಯತೆಗಳ ಕುರಿತು ನ್ಯಾಯಾಂಗ ವಿಚಾರಣೆ ನಡೆಸಲು ಸರಕಾರ ತೀರ್ಮಾನಿಸಿದುದರಿಂದ ಆ ಕುರಿತು ನಾವು ಈಗ ಏನನ್ನೂ ಹೇಳಬಯಸುವುದಿಲ್ಲ, ಆದೇನಿದ್ದರೂ ಕೇರಳ ಬಂದನ್ನು ಹಿಂಸಾಕಾಂಡವನ್ನಾಗಿ ಪರಿವರ್ತಿಸಲು, ಶ್ರಮಿಸಿದ ಜನಸಂಘ, ಆರ್. ಯುಸ್. ಯುಸ್ ಮುಖಂಡತ್ವ ಕಾಸರಗೋಡಿನಲ್ಲಿ ನಡೆದ ಅನಿಷ್ಟ ಪ್ರಕರಣಗಳಿಗೆ ಸಂಪೂರ್ಣ ಜವಾಬ್ದಾರಿ ವಹಿಸಿ ಕೊಳ್ಳಬೇಕಾಗಿದೆ.

ಕಾಸರಗೋಡಿನಲ್ಲಿ, ಹಿಂದೂ ಮುಸ್ಲಿಂ ಗಲಭೆಗೆ ಆಸ್ಪದ ಇರುವಷ್ಟು ಕಾಲ ಶಾಂತಿ ಸಮಾಧಾನಗಳನ್ನು ಪಾಲಿಸಲು ಸಾಧ್ಯವಿಲ್ಲ. ಎಲ್ಲಾ ಪಕ್ಷಪಂಗಡಗಳೂ, ತಮ್ಮ ಸ್ವಾರ್ಥಹಿತ ಸಾಧನೆಗಳನ್ನು ಬದಿಗಿಟ್ಟು ಹಿಂದೂ ಮುಸ್ಲಿಂ ಮೈತ್ರಿಯನ್ನು ಕಟ್ಟಲು ಶ್ರಮಿಸಬೇಕಾದುದು ಈ ಸಮಯದ ಸರ್ವ ಪ್ರಧಾನ ಕರ್ತವ್ಯ. ಕೋಮುವಾರು ಮತಾಂಧತೆಗೆ ಬಲಿ ಬೀಳದೆ ಪ್ರಜಾಪ್ರಭುತ್ವವಾದೀ ಚಳವಳವನ್ನು ಶಕ್ತಿಗೊಳಿಸಿ ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳೆಸಲು ನಾವೆಲ್ಲರನ್ನು ಕಳಕಳಿಯಿಂದ ಕೇಳಕೊಳುತ್ತೇವೆ.

ತಾ. 19—9—67ರಂದು ಮುನಿಸಿಪಲ್ ಕೆಲಸಗಾರರು ನಗರ ಸಭೆಯ ಮುಂದೆ ಮತಪ್ರದರ್ಶನ ನಡೆಸುವರು

ಮುನ್ಸಿಪಲ್ ಕೆಲಸಗಾರರ ಕೇಳಿಕೆಗಳ ವಿಚಾರಣೆ ನಡೆಸಿ ಬೆಂಗಳೂರಿನ ಇಂಡಸ್ಟ್ರಿಯಲ್ ಟ್ರೈಬ್ಯೂನಲ್ ಕೊಟ್ಟಿರುವ ತೀರ್ಪನ್ನು ಜ್ಯಾರಿಗೊಳಿಸದ ಮಂಗಳೂರು ಮುನ್ಸಿಪಲ್ ಮೆನೇಜ್‌ಮೆಂಟಿನ ನೀತಿಯನ್ನು ಪ್ರತಿಭಟಿಸಿ, ತೀರ್ಪನ್ನು ಕೂಡಲೇ ಜ್ಯಾರಿಗೊಳಿಸುವಂತೆ ಒತ್ತಾಯಿಸಲು ತಾ. 19-9-67 ರಂದು ನಗರ ಸಭೆಯ ಸಭೆ ಸೇರುವಾಗ ಮುನ್ಸಿಪಲ್ ಕೆಲಸಗಾರರು ಮತಪ್ರದರ್ಶನ ನಡೆಸಲಿರುವರು.

ರೂ. 600 ಪರಿಹಾರ ಸಿಕ್ಕಿತು

ಮಂಗಳೂರು ಗಣೇಶ ಬೀಡಿ ವರ್ಕ್ಸ್‌ನ ಕುಲಾಯಿ ಡಿಪೋದಲ್ಲಿ ಪಿಯೋನ್ ಆಗಿದ್ದ ಶ್ರೀ ಮೋನಪ್ಪ ಎಂಬವರನ್ನು ಡಿಸ್‌ಮಿಸ್ ಮಾಡಿದುದರ ವಿವಾದದಲ್ಲಿ ತಾರೀಕು 11--9—67ರಂದು ಲೇಬರ್ ಆಫೀಸರರ ಸಮ್ಮುಖದಲ್ಲಿ ಕನ್ಸಿಲಿಯೇಶನ್ ನಡೆದು ರೂ. 600 ಪರಿಹಾರ ಮತ್ತು 1966—67ನೇ ವರ್ಷದ ಬೋನಸ್ ಕೊಡಲು ಮೇನೆಜ್‌ಮೆಂಟ್ ಒಪ್ಪಿದ್ದರಿಂದ ವಿವಾದ ರಾಜಿಯಲ್ಲಿ ತೀರ್ಮಾನವಾಗಿರುತ್ತದೆ. ಕೆಲಸಗಾರನ ಕಡೆಯಿಂದ ದ. ಕ. ಜಿಲ್ಲಾ ಬೀಡಿ ಎಂಡ್ ಟೊಬೆಕ್ಕೋ ಲೇಬರ್ ಯೂನಿಯನಿನ ಅಧ್ಯಕ್ಷ ಮತ್ತು ಕಾರ್ದರ್ಶಿ ಶ್ರೀ. ಕೆ. ಮೋನಪ್ಪ ಶೆಟ್ಟಿ ಮತ್ತು ಯು. ಕೃಷ್ಣನವರೂ ಮೆನೇಜ್‌ಮೆಂಟಿನ ಕಡೆಯಿಂದ ಎಡ್ವಕೇಟ್ ಶ್ರೀ ಕೆ. ಶಶಿಧರ ರಾಯರೂ ಪ್ರತಿನಿಧೀಕರಿಸಿ ಹಾಜರಾಗಿದ್ದರು.

325 ರೂಪಾಯಿ ಪರಿಹಾರ ಸಿಕ್ಕಿತು

ಬಂದರಿನಲ್ಲಿರು ಗೋಕುಲ್ ಕೋಲ್ಡ್ ಡ್ರಿಂಕ್ಸ್ ಹೌಸಿನಲ್ಲಿ ಕೆಲಸಗಾರರಾಗಿದ್ದ ಶ್ರೀ ರವೀಂದ್ರ ಎಂಬ ಕೆಲಸಗಾರನನ್ನು ಕೆಲಸದಿಂದ ಡಿಸ್‌ಮಿಸ್‌ಮಾಡಿರುವ ವಿವಾದದ ಕುರಿತು ಲೇಬರ್ ಆಫೀಸರರ ಸಮ್ಮುಖದಲ್ಲಿ ಮಾತುಕತೆ ನಡೆದು ರೂ. 325 ಪರಿಹಾರ ಕೊಡಲು ಮಾಲಿಕರು ಒಪ್ಪಿದ್ದರಿಂದ ವಿವಾದವು ರಾಜಿಯಲ್ಲಿ ತೀರ್ಮಾನವಾಗಿರುತ್ತದೆ.

ಕಳೆದ ಎರಡು ವರುಷಗಳ ತುಟ್ಟಿಭತ್ತೆ ಪಡೆಯಲು ಗೇರು ಬೀಜ ಕೆಲಸಗಾರರ ಚಳುವಳಿ

ತಾರೀಕು 21 – 9 – 1967ರಿಂದ ಕಾರ್ಖಾನೆ ಗೇಟಿನ ಮುಂದೆ ಅನ್ನ ಸತ್ಯಾಗ್ರಹ

ಮಂಗಳೂರಿನ ಬಜಾರ್ ಗೋವಿಂದ ಪೈ, ಫೆರ್ನಾಂಡಿಸ್ ಎಂಡ್ ಬ್ರದರ್ಸ್ ಮತ್ತು ಸ್ವಸ್ತಿ ಗೇರುಬೀಜ ಕಾರ್ಖಾನೆಗಳ ಕೆಲಸಗಾರರಿಗೆ ಬಾಕಿ ಇರುವ ಎರಡು ವರ್ಷಗಳ ತುಟ್ಟಿಭತ್ತೆಯನ್ನು ವಸೂಲು ಮಾಡಲು ನಡೆದಿರುವ ಪ್ರಯತ್ನಗಳು ವಿಫಲಗೊಂಡದ್ದರಿಂದ ಕೆಲಸಗಾರರು ಹೋರಾಟ ನಡೆಸಲು ನಿರ್ಬಂಧಿತರಾಗಿದ್ದಾರೆ.

ಗೇರುಬೀಜ ಕೆಲಸಗಾರರಿಗೆ ದಿನಕ್ಕೆ 50 ಪೈಸೆಯಂತೆ ತುಟ್ಟಿಭತ್ತೆ ಕೊಡಬೇಕೆಂದು ಇಂಡಸ್ಟ್ರಿಯಲ್ ಟ್ರೈಬ್ಯೂನಲಿನ ತೀರ್ಪಿಗೆ ವಿರುದ್ಧವಾಗಿ ಮಾಲಿಕರು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಕೆಲಸಗಾರರು ಎವಾರ್ಡನ್ನು ಜ್ಯಾರಿಗೊಳಿಸುವಂತೆ 5 ತಿಂಗಳ ಕಾಲ ಮುಷ್ಕರ ನಡೆಸಿದರು. ಹೈಕೋರ್ಟು ರಿಟ್ ಅರ್ಜಿಯ ವಿಚಾರಣೆ ನಡೆಸಿ ವಿವಾದದ ಕುರಿತು ಪುನರ್ ವಿಚಾರಣೆ ನಡೆಸಬೇಕೆಂದು ಇಂಡಸ್ಟ್ರಿಯಲ್ ಟ್ರೈಬ್ಯೂನಲಿಗೆ ಒಪ್ಪಿಸಿತು. ಇಂಡಸ್ಟ್ರಿಯಲ್ ಟ್ರೈಬ್ಯೂನಲ್ ಇನ್ನೊಮ್ಮೆ ವಿಚಾರಣೆ ನಡೆಸಿ ಹಿಂದಿನ ತೀರ್ಮಾನವನ್ನೇ ದೃಢಪಡಿಸಿತು. ಕೊನೆಗೆ ಮಾಲಿಕರುಗಳು ಸುಪ್ರೀಂ ಕೋರ್ಟಿನ ಮರೆ ಹೊಕ್ಕರು. ಅಲ್ಲಿಯೂ ಮಾಲಕರುಗಳಿಗೆ ಸೋಲಾಯಿತು. ಮಾಲಿಕರುಗಳ ಅರ್ಜಿಯನ್ನು ಸುಪ್ರೀಂ ಕೋರ್ಟು ತಿರಸ್ಕರಿಸಿತು. ಇದಿಷ್ಟು ಗೇರುಬೀಜ ಕೆಲಸಗಾರರು ತುಟ್ಟಿಭತ್ತೆ ಪಡೆಯಲು ನಡೆಸಿರುವ ಚಳುವಳಿಯ ಸಾರಾಂಶವಾಗಿರುತ್ತದೆ.

ನಂತರ ತುಟ್ಟಿಭತ್ತೆ ಜ್ಯಾರಿಯಾಗಿದೆ. ಸುಪ್ರೀಂ ಕೋರ್ಟಿನಲ್ಲಿ ಮಾಲಿಕರುಗಳ ಅರ್ಜಿ ತಿರಸ್ಕರಿಸಿದ ನಂತರ ದಿನಕ್ಕೆ 50ಪೈಸೆಯಂತೆ ತುಟ್ಟಿಭತ್ತೆ ಕೊಡಲು ಆರಂಭಿಸಿರುತ್ತಾರೆ. ಆದರೂ ಗೇರ ಬೀಜ ಕೆಲಸಗಾರರು ಚಳುವಳಿ ನಡೆಸಲು ನಿರ್ಬಂಧಿತರಾಗಿದ್ದಾರೆ. ತುಟ್ಟಿಭತ್ತೆ ಜ್ಯಾರಿಗೊಳಿಸಿರುವುದೇನೊ ನಿಜ. ಆದರೆ ಕೈಗಾರಿಕಾ ಕೋರ್ಟಿನ ತೀರ್ಮಾನದಂತೆ ಬಾಕಿ ಇರುವ ಎರಡು ವರ್ಷಗಳ ತುಟ್ಟಿಭತ್ತೆಯನ್ನು ಲೆಖ್ಖಮಾಡಿ ಇನ್ನೂ ಕೊಟ್ಟಿಲ್ಲ. ಮಾತುಕತೆ ಮೂಲಕ ತೀರ್ಮಾನಿಸಲು ಪ್ರಯತ್ನಿಸಿದರೂ ಪ್ರಯೋಜನವಾಗಿಲ್ಲ.

ಎಂತಲೇ ಕೆಲಸಗಾರರು ಹೋರಾಟಕ್ಕೆ ಸಿದ್ಧತೆ ನಡೆಸುತಿದ್ದಾರೆ. ತಾ. 18, 19 ಮತ್ತು 20 ಈ ಮೂರು ದಿನಗಳಲ್ಲಿ ಕಾರ್ಖಾನೆಗಳ ಗೇಟಿನ ಮುಂದೆ ಬಹಿರಂಗ ಸಭೆಗಳು ಜರಗುವುವು. ತಾ. 21ರಿಂದ 3 ದಿನಗಳ ವರೆಗೆ 3 ಕಾರ್ಖಾನೆಗಳ ಇದಿರಲ್ಲಿ ಕೆಲಸಗಾರರು ಅನ್ನ ಸತ್ಯಾಗ್ರಹ ನಡೆಸುವರು. ಬಾಕಿ ಇರುವ ತುಟ್ಟಿಭತ್ತೆ ಪಡೆಯುವ ಗೇರುಬೀಜ ಕೆಲಸಗಾರರ ಚಳುವಳಿಯ ಪ್ರಥಮ ಹೆಜ್ಜೆಯಾಗಿವೆ – ಈ ಸಭೆ, ಅನ್ನ ಸತ್ಯಾಗ್ರಹಗಳು. ಸರಕಾರ ಕಣ್ತೆರೆಯಬೇಕು. ಕೋರ್ಟಿನ ತೀರ್ಪನ್ನು ಜ್ಯಾರಿಗೊಳಿಸಲು ಮಾಲಿಕರ ವಿರುದ್ಧ ಸರಕಾರ ತಕ್ಕ ನಡವಳಿಕೆಯ ಕ್ರಮ ಕೈಗೊಳ್ಳಬೇಕು. ಮಾಲಿಕರನ್ನು ನಾವು ಎಚ್ಚರಿಸಬಯಸುತ್ತೇವೆ. ಗೇರುಬೀಜ ಕೆಲಸಗಾರರ ಈ ಚಳುವಳಿ ಬರೇ ಕಾರ್ಖಾನೆ ಗೇಟುಗಳಲ್ಲೇ ಸೀಮಿತವಾಗಿರಲಾರದು. ಬೆಂಗಳೂರಿನ ವಿಧಾನ ಸಭೆಯ ಮುಂದೆಯೂ, ರಾಜ್ಯದ ಮುಖ್ಯಮಂತ್ರಿಗಳ ನಿವಾಸಕ್ಕೂ ಹರಡಬಹುದು.

———

Printed by U. N. Srinivas Bhat at Aruna Press, Canara High School Road, Dongerkery Mangalore-3
and Edited & Published by him at 62, Central Market, Mangalore-1—(phone 3806)